ಕನ್ನಡದ ಪಟ್ಟದ್ದೇವರು

ಡಾ. ಚನ್ನಬಸವ ಪಟ್ಟದ್ದೇವರು

ಲೇಖಕರು :
ವಿಜಯಲಕ್ಷ್ಮಿ ಶಿ. ಕೌಟಗೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.
Email : kasapabidar@gmail.com - www.kasapabidar.in

ವಿಜಯಲಕ್ಷ್ಮಿ ಕೌಟಗೆ

ನಮ್ಮ ಮಧ್ಯದ ಪ್ರಮುಖ ಮಹಿಳಾ ಸಾಹಿತಿಗಳಲ್ಲಿ ಒಬ್ಬರಾದ ಶ್ರೀಮತಿ ವಿಜಯಲಕ್ಷ್ಮಿ ಶಿ. ಕೌಟಗೆ, ಬಸವಾದಿ ಶರಣರ ತತ್ವಾದರ್ಶಗಳಿಂದ ಪ್ರಭಾವಿತರಾಗಿ ಶರಣ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಆದರ್ಶ ಸದ್ಗೃಹಿಣಿ. ಇವರು ಮೂಲತಃ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಮೇಹಕರ ಗ್ರಾಮದ ಪ್ರತಿಷ್ಠಿತ ಮಂಗಣೆ ಪರಿವಾರದ ನಾಗಮ್ಮ ಎಮ್, ಎಮ್, ವಿಶ್ವನಾಥ ದಂಪತಿಗಳಿಗೆ **11-06-1975** ರಂದು ಜನಿಸಿದ್ದಾರೆ. ಔರಾದ ತಾಲ್ಲೂಕಿನ ಡೋಣಗಾವದ ಶಿವಕುಮಾರ ಕೌಟಗೆಯವರೊಂದಿಗೆ ವಿವಾಹವಾಗಿ, ಗೃಹಿಣಿಯಾಗಿದ್ದುಕೊಂಡು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. 'ಪ್ರೀತಿ ಒಂದೆಯಿರಲಿ' ಕವನಸಂಕಲನ, 'ವಿಶ್ವ ವಿಜಯ'. 'ಕ್ರಾಂತಿ ಮಾತೆ ಅಕ್ಕನಾಗಮ್ಮ' 'ಬಲ್ಲಾಳದ ರಾಣಿ ಅಬ್ಬಕ್ಕ' ಮೊದಲಾದ ಕಾದಂಬರಿಗಳನ್ನು 'ಕದಳಿ ಬೆಳಕು' ಎಂಬ ಮಹಾಕಾವ್ಯ. ಹಾಗೂ 'ಅಕ್ಕ ಮಹಾದೇವಿ'. 'ಆಯ್ದಕ್ಕಿ ಲಕ್ಕಮ್ಮ' 'ಕದಳಿ ಕೋಗಿಲೆ' ಜೀವನ ಚರಿತ್ರೆಗಳು, ಮತ್ತು ' ಹನ್ನೆರಡನೆ ಶತಮಾನದ ಶರಣೆಯರ ಜೀವನ ಚರಿತ್ರೆ' 'ಶರಣ ಸಂಕುಲ' 'ಲಿಂಗಾರಾಧನೆ ಭವಕ್ಕೆ ಬೀಜ' 'ಶರಣೆಯರ ಸಮಗ್ರ ಬದುಕು ಬರಹ' ಇವು ಅವರು ಪ್ರಕಟಿಸಿದ ಪ್ರಮುಖ ಕೃತಿಗಳಾಗಿದ್ದು ಐತಿಹಾಸಿಕ ಕಾದಂಬರಿ ಬರೆಯುವುದರಲ್ಲಿ ಸಿದ್ಧಹಸ್ತರು. ನಾಡಿನ ಪ್ರತಿಷ್ಠಿತ ಪತ್ರಿಕೆಗಳಾದ ಬಸವಮಾರ್ಗ, ಸಾವಧಾನ, ಸುದ್ದಿ ಚಿಂತನ, ಬಣಜಿಗರ ಬಂಧು, ಮೊದಲಾದ ನಿಯತಕಾಲಿಕೆಗಳಲ್ಲಿ ಇವರ ಕವನ, ಲೇಖನ, ಬರಹಗಳು ಪ್ರಕಟವಾಗಿವೆ.

ಇವರ ಸಾಹಿತ್ಯ ಸಾಧನೆಗೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ "ನೀಲಗಂಗಾ ದತ್ತಿ ಪ್ರಶಸ್ತಿ", ಗುಲ್ಬರ್ಗ ವಿಶ್ವವಿದ್ಯಾಲಯದ "ರಾಜ್ಯೋತ್ಸವ ಪ್ರಶಸ್ತಿ" ಬೆಂಗಳೂರಿನ ಅಖಿಲ ಭಾರತ ವಚನ ಸಾಹಿತ್ಯ ಪರಿಷತ್ತಿನಿಂದ ' "ವಚನ ಶ್ರೀ ಪ್ರಶಸ್ತಿ" ಬಸವ ಮಹಾಮಠ ನಿಡವಂಚ ಮನ್ನಾಎಖೆಳಿಯಿಂದ ' "ಅಕ್ಕ ಮಹಾದೇವಿ ಪ್ರಶಸ್ತಿ" , ಬೀದರದ ದೇಶಪಾಂಡೆ ಪ್ರತಿಷ್ಠಾನದ "ಕಾವ್ಯ ಸಿಂಧು ಪ್ರಶಸ್ತಿ", "ಶರಣ ಕುಸುಮಾಂಜಲಿ ಪ್ರಶಸ್ತಿ" ಇಳಕಲ್ ಮಠದ "ಬಸವಗುರು ಕಾರುಣ್ಯ ಪ್ರಶಸ್ತಿ" ಹಿರೇಮಠ ಸಂಸ್ಥಾನ ಭಾಲ್ಕಿ ವತಿಯಿಂದ 'ಕಲ್ಯಾಣ ಕದಳಿ' ಕೃತಿಗೆ "ಬೀದರ ಜಿಲ್ಲೆಯ ಉತ್ತಮ ಗ್ರಂಥ ಪ್ರಶಸ್ತಿ", ಹುಲಸೂರು ಮಠದ "ಸಾಹಿತ್ಯ ರತ್ನ ಪ್ರಶಸ್ತಿ" **6**ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಿಮಿತ್ತ "ಸಾಹಿತ್ಯ ಸೇವಾ ಪ್ರಶಸ್ತಿ" ಸೇರಿದಂತೆ ಅನೇಕ ಪ್ರಶಸ್ತಿ ಗೌರವಗಳಿಗೆ ಭಾಜನರಾಗಿದ್ದಾರೆ. ಪ್ರಸ್ತುತ 'ಕನ್ನಡದ ಪಟ್ಟದ್ದೇವರು ಡಾ.ಚನ್ನಬಸವ ಪಟ್ಟದ್ದೇವರು' ಎಂಬ ಕೃತಿ ಹೊರತರಲಿದ್ದು ಇವರಿಂದ ಇನ್ನೂ ಹೆಚ್ಚಿನ ಕೃತಿಗಳು ಹೊರಬರಲೆಂದು ಶುಭ ಹಾರೈಸುವೆ.

ರಾಹು ಕಲಬುರಗಿ

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ
ಕನ್ನಡ ಕಟ್ಟಿದವರು ಮಾಲಿಕೆ

ಕನ್ನಡದ ಪಟ್ಟದ್ದೇವರು

ಡಾ. ಚನ್ನಬಸವಪಟ್ಟದ್ದೇವರು

ಲೇಖಕರು
ವಿಜಯಲಕ್ಷ್ಮಿ ಶಿ. ಕೌಟಗೆ, ಬೀದರ್

ಪ್ರಕಾಶಕರು
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ
೨೦೨೦

ಕನ್ನಡದ ಪಟ್ಟದ್ದೇವರು ಡಾ. ಚನ್ನಬಸವ ಪಟ್ಟದ್ದೇವರು
ಲೇ: ವಿಜಯಲಕ್ಷ್ಮಿ ಶಿ. ಕೌಟಗೆ ಬೀದರ-೫೮೫೪೦೩. # ೧೬-೧-೩೦೩
ಕೈಲಾಸನಗರ, ಶ್ರೀ ಸಿದ್ಧಾರೂಢ ಮಠದ ಹಿಂದೆ, ಬೀದರ,
ಮೊ : ೯೮೮೦೮೧೪೭೯
ಪ್ರಕಾಶಕರು ಃ **ಸುರೇಶ ಚನಶೆಟ್ಟಿ,**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ: ೯೯೮೬೭೯೨೩೨೩
E-mail:kasapabidar@gmail.com, web: www.kasapabidar.in
ಪ್ರಥಮ ಮುದ್ರಣ ಃ ೨೦೨೦
ಹಕ್ಕುಗಳು ಃ ಲೇಖಕರದ್ದು
ಪುಟಗಳು ಃ ೪೪
ಬೆಲೆ ಃ ೫೦/-
ಅಕ್ಷರ ಜೋಡಣೆ ಃ ಪಾಟೀಲ ಕಂಪ್ಯೂಟರ್ಸ್, ಬೀದರ.
ಪುಸ್ತಕ ವಿನ್ಯಾಸ ಃ ಆರ್.ವ್ಹಿ. ಕುಂಬಾರ, ಬೀದರ.
ಮುಖಪುಟ ವಿನ್ಯಾಸ ಃ ಅಕ್ಷಯ ಗ್ರಾಫಿಕ್ಸ್, ಬೀದರ
ಮುದ್ರಕರು ಃ ವಿಶ್ವಾಸ ಪ್ರೆಸ್ ಬೆಂಗಳೂರು

ವಿ.ಸೂ. : ಈ ಕೃತಿಯಲ್ಲಿ ಬರುವ ಅಭಿಪ್ರಾಯಗಳು ಹಾಗೂ ವಿವರಗಳು ಲೇಖಕರಿಗೆ ಸಂಬಂಧಿಸಿದವುಗಳಾಗಿರುತ್ತವೆ. -ಪ್ರಕಾಶಕರು

ಪುಸ್ತಕ ಪ್ರಕಟಣೆ ಸಲಹಾ ಸಮಿತಿ

ಶ್ರೀ ಸುರೇಶ ಚನಶೆಟ್ಟಿ, ಅಧ್ಯಕ್ಷರು, ಜಿಲ್ಲಾ ಕಸಾಪ, ಬೀದರ
ಪೂಜ್ಯಶ್ರೀ ಅಕ್ಕ ಅನ್ನಪೂರ್ಣ, ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು
ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ, ಗೌರವಾಧ್ಯಕ್ಷರು, ಜಿಲ್ಲಾ ಕಸಾಪ, ಬೀದರ
ಶ್ರೀ ಎಂ.ಜಿ. ದೇಶಪಾಂಡೆ, ಹಿರಿಯ ಸಾಹಿತಿಗಳು, ಬೀದರ
ಶ್ರೀ ಎಸ್.ಎಂ. ಜನವಾಡಕರ್, ಹಿರಿಯ ಸಾಹಿತಿಗಳು, ಬೀದರ
ಶ್ರೀಮತಿ ಶಶಿಕಲಾ ವಸ್ತ್ರದ, ಹಿರಿಯ ಸಾಹಿತಿಗಳು, ಬೀದರ
ಡಾ. ಶಿವಗಂಗಾ ರುಮ್ಮಾ, ಮಹಿಳಾ ಸಾಹಿತಿಗಳು, ಬೀದರ
ಡಾ. ಬಸವರಾಜ ಬಲ್ಲೂರ, ಗೌ. ಕಾರ್ಯದರ್ಶಿ, ಜಿಲ್ಲಾ ಕಸಾಪ, ಬೀದರ
ಶ್ರೀ ಶಿವಕುಮಾರ ಕಟ್ಟೆ, ಸಾಹಿತಿಗಳು ಹಾಗೂ ಗಡಿ ಪ್ರತಿನಿಧಿ, ಜಿಲ್ಲಾ ಕಸಾಪ, ಬೀದರ
ಶ್ರೀ ಎಂ.ಎಸ್. ಮನೋಹರ, ಸಾಹಿತಿಗಳು ಹಾಗೂ ಅಧ್ಯಕ್ಷರು ತಾಲ್ಲೂಕು ಕಸಾಪ, ಬೀದರ
ಶ್ರೀ ಶಿವಶಂಕರ ಟೋಕರೆ, ಸಂಚಾಲಕರು ಜಿಲ್ಲಾ ಕಸಾಪ, ಬೀದರ.
ಪ್ರೊ. ಜಗನ್ನಾಥ ಕಮಲಾಪುರೆ, ಗೌರವ ಸಲಹೆಗಾರು, ಜಿಲ್ಲಾ ಕಸಾಪ, ಬೀದರ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು

ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು
ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ
ಡಾ.ಬಸವರಾಜ ಬಲ್ಲೂರ
ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು
ಟಿ.ಎಂ.ಮಚ್ಚೆ

ಉಪಾಧ್ಯಕ್ಷರು
ಜಯದೇವಿ ಯದಲಾಪೂರೆ
ವಿಜಯಕುಮಾರ ಗೌರೆ,
ವಿರುಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ
ಕಸ್ತೂರಿ ಪಟಪಳ್ಳಿ

ಮಹಿಳಾ ಸಾಹಿತಿ
ಮೇನಕಾ ಪಾಟೀಲ

ಮಹಿಳಾ ಘಟಕ ಅಧ್ಯಕ್ಷರು
ಜಯಶ್ರೀ ಸುಕಾಲೆ

ಮಕ್ಕಳ ಘಟಕ ಅಧ್ಯಕ್ಷರು
ರಜಿಯಾ ಬಳಬಟ್ಟಿ

ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ
ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ
ಸುಬ್ರಹ್ಮಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ
ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು
ಸಿದ್ರಾಮ ಸಿಂಧೆ

ನಿಕಟಪೂರ್ವ ಅಧ್ಯಕ್ಷರು
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ
ಡಾ. ಮಹಮದ್ ಗುಲ್ಫಿನ್

ಗಡಿ ಪ್ರತಿನಿಧಿ
ಪ್ರೊ. ಶಿವಕುಮಾರ ಕಟ್ಟೆ
ವಸಂತ ಹುನಸನಾಳೆ,

ಸಂಚಾಲಕರು
ಶಿವಶಂಕರ ಟೋಕರೆ

ಅಧ್ಯಕ್ಷರು
ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು
ಎಂ. ಎಸ್. ಮನೋಹರ, ಬೀದರ
ಜಗನ್ನಾಥ ಮೂಲಗೆ, ಔರಾದ
ಸಚ್ಚಿದಾನಂದ ಮಠಪತಿ,
ಹುಮನಾಬಾದ
ಡಾ. ರುದ್ರಮಣಿ ಮಠಪತಿ,
ಬಸವಕಲ್ಯಾಣ
ಶಶಿಧರ ಕೊಸಂಬೆ ಭಾಲ್ಕಿ
ಪ್ರಶಾಂತ ಮಠಪತಿ ಕಮಾಲನಗರ
ಡಾ. ಶಿವಲೀಲಾ ಮಠಪತಿ, ಹುಲಸೂರ
ಅನಿಲಕುಮಾರ ಸಿಂಧೆ, ಚಿಟಗುಪ್ಪ

ಸಂಘಟನಾ ಕಾರ್ಯದರ್ಶಿ
ಉಮಾಕಾಂತ ವಾರದ,
ಶಾಂತಲಿಂಗ ಮಠಪತಿ
ವೀರಶೆಟ್ಟಿ ಪಟ್ನೆ

ಗೌರವ ಸಲಹೆಗಾರರು
ಕಾಶೆಪ್ಪಾ ಬಾಲಕಿಲೆ
ಶರಣಪ್ಪಾ ಮಿಠಾರೆ
ವೈಜಿನಾಥ ಕಮಠಾಣೆ
ಬಸವರಾಜ ಧನ್ನೂರ
ಪ್ರೊ. ಎಸ್. ವಿ. ಕಲ್ಮಠ
ಡಾ.ಜಗನ್ನಾಥ ಹೆಬ್ಬಾಳೆ
ಪ್ರೊ. ಶಂಭುಲಿಂಗ ಕಾಮಣ್ಣಾ
ರಮೇಶ್ ಮಠಪತಿ

ರಾಜಕುಮಾರ್ ಪಾಟೀಲ ಬಗದಲ್
ಶಿವಕುಮಾರಸ್ವಾಮಿ
ಎಸ.ಎಮ್.ಜನವಾಡಕರ್
ಡಾ.ಮನ್ಮಥ ಡೋಳೆ
ಶಿವಯ್ಯಾ ಸ್ವಾಮಿ
ಝಾಕೀರ ಹುಸೇನ್

ವಿಶೇಷ ಆಹ್ವಾನಿತರು
ರಾಜೆಂದ್ರಕುಮಾರ ಗಂದಗೆ
ಡಾ.ಸಿ ಆನಂದರಾವ
ಬಾಲಾಜಿ ಬಿರಾದಾರ
ಪಾಂಡುರಂಗ ಬೆಲ್ದಾರ್
ರವೀಂದ್ರ ರೆಡ್ಡಿ
ಡಾ. ಬಂಡಯ್ಯಾ ಸ್ವಾಮಿ

ಕಾರ್ಯಕಾರಿ ಸದಸ್ಯರು
ಜಗನ್ನಾಥಕಮಲಾಪೂರೆ
ಯೋಗೇಶ ಮಠ
ಸಚೀನ ವಿಶ್ವಕರ್ಮ
ದೇವೆಂದ್ರ ಕರಂಜೆ
ಅನೀಲಕುಮಾರ ದೇಶಮುಖ
ಸಿದ್ದಾರೂಢ ಕಂದಗೂಳ
ಶಿವಾನಂದ ಪಾಟೀಲ
ಅಶೋಕ್ ದೀಡಿಗೆ
ಸಿದ್ಧಾರೂಢ ಭಾಲ್ಕೆ
ಗಿರಿರಾಜ ವಾಲೆ
ಆನಂದ ಪಾಟೀಲ

ಮುನ್ನುಡಿ

ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ.

ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು.

ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು

ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ "ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ "ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಕ್ಷರ ಪ್ರೀತಿಯ ನುಡಿ

(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿ ಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗಾಗಿ ತಮ್ಮನ್ನು

ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಜನ ಕನ್ನಡ ಕಟ್ಟಿದವರು ಹಾಗೂ ೧೭ ಜನ ಸಾಂಸ್ಕೃತಿಕ ಚಿಂತಕರ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ನಮ್ಮ ಮಧ್ಯದ ಅಪರೂಪದ ಸಾಹಿತಿಗಳಾದ **ಶ್ರೀಮತಿ ವಿಜಯಲಕ್ಷ್ಮಿ ಕೌಟಗೆ** ಅವರ **ಕನ್ನಡದ ಪಟ್ಟದ್ದೇವರು ಡಾ. ಚನ್ನಬಸವಪಟ್ಟದೇವರು** ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಚನ್ನಬಸವ ಪಟ್ಟದ್ದೇವರು ಈ ಭಾಗದಲ್ಲಿ ಕನಡತ್ವ ಹಾಗೂ ಬಸವತತ್ವಕ್ಕಾಗಿ ಅಹರ್ನಿಶಿ ದುಡಿದವರಾಗಿದ್ದಾರೆ. ಬಸವತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಗಳ ಜೀವನ ಸಾಧನೆ ಕುರಿತು ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ.

ಪ್ರಸ್ತುತ ಪುಸ್ತಕಕ್ಕೆ ಮೌಲಿಕ ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜ ಡಾ. ಮನು ಬಳಿಗಾರ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ಮತ್ತು ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನಶೆಟ್ಟಿ

ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಕನ್ನಡ ಕಟ್ಟಿದವರು

ಮನುಷ್ಯರ ಬಹುಮುಖ್ಯ ಅಸ್ಮಿತೆ ಎಂದರೆ ಅವರ ಮಾತೃಭಾಷೆ. ಅದರ ಏಳಿಗೆಯೇ ಅವರ ಸಾಂಸ್ಕೃತಿಕ ಏಳಿಗೆಯೂ ಆಗಿರುತದೆಂಬುದು ಬೇರೆ ಹೇಳ ಬೇಕಿಲ್ಲ. ಈ ಹಿನ್ನೆಲೆಯಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕದ ಏಳಿಗೆಯೇ ಬದುಕಿನ ಏಕಮಾತ್ರ ಉದ್ದೇಶವೆಂದರಿತು ಹೋರಾಟ ಮಾಡಿದ ಮಹನೀಯರ ಕಾರಣವಾಗಿ ಈ ನೆಲದಲ್ಲಿ ಇವತ್ತು ಕನ್ನಡ ಉಸಿರಾಡುವಂತಾಗಿದೆ. ಹಿಂದಣ ಹೆಜ್ಜೆಯನರಿತಲ್ಲದೆನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ಮಹಾರಾಜರ ವೈಭವದ ಬದುಕು, ಕೋಟೆ ಕೊತಲಗಳೇ ಅಲ್ಲ, ರಾಜ ಪರಿವಾರದ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತ್ತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಘೂಡೆ)ಗಳಿಗೂ ಅಷ್ಟೇ ಮಹತ್ವವಿರುವಂತೆ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕಿಗಳಿಗೂ ಇರುತ್ತದೆ. ಅಂಥ ಸಾಂಸ್ಕೃತಿಕ ವ್ಯಕಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕನ್ನಡ ನಾಡು, ನುಡಿ ಭಾಷೆ, ಸಾಹಿತ್ಯದ ಉಳಿವಿಗೆ ಹೋರಾಡಿ ಗಣನೀಯ ಸೇವೆ ಸಲ್ಲಿಸಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕನ್ನಡ ಕಟ್ಟಿದವರು ಮಾಲಿಕೆ ಆರಂಭಿಸಿದೆ. ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ಕನ್ನಡ ಕಟ್ಟಿದವರು ೧೭, ಹಾಗೂ ೧೭ ಜನ ಸಾಂಸ್ಕೃತಿಕ ಚಿಂತಕರ ಪುಸ್ತಕಗಳನ್ನು ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಕನ್ನಡ ಹೋರಾಟಗಾರರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುತ್ತಿದೆ. ಹಿತಲ ಗಿಡ ಮದ್ದಲ್ಲ, ತಮ್ಮ ನೆಲದಲ್ಲಿ ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತಪ್ಪು ಗ್ರಹಿಕೆಯ ಹುಸಿಗೊಳಿಸಲು ಈ ಯೋಜನೆ ರೂಪಿಸಲಾಗಿದೆ. ಈ ಪುಸ್ತಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕ್ತಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೀನ ಸಾಂಸ್ಕೃತಿಕ ಚಿಂತನೆಗಳನ್ನು ದಾಖಲಿಸುವ ಜೀವನ ಚರಿತ್ರೆ ಕಟ್ಟಿಕೊಡಲಾಗುತ್ತದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ. ಬಸವರಾಜ ಬಲ್ಲೂರ

ಲೇಖಕರ ನುಡಿ

ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ೧೭ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ಕನ್ನಡ ಕಟ್ಟಿದವರು ಕುರಿತು ಪುಟ್ಟ ಹೊತ್ತಿಗೆ ಹೊರ ತರುವ ಹಿನ್ನೆಲೆಯಲ್ಲಿ ಕನ್ನಡದ ಕುಲ ಗುರು ಡಾ. ಚನ್ನಬಸವ ಪಟ್ಟದ್ದೇವರ ಕುರಿತು ನೀವು ಬರೆಯಬೇಕು ಎಂದು ಕೇಳಿಕೊಂಡಾಗ ನಾನು ತಕ್ಷಣಕ್ಕೆ ಒಪ್ಪಿಕೊಂಡೆ.

ಸಮ್ಮೇಳನದ ಹೆಸರಿನಲ್ಲಿ ಯಾವ್ಯಾವುದೋ ಜಾತ್ರೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುರೇಶ ಚನಶೆಟ್ಟಿ ಅವರು ಒಂದು ಅರ್ಥಪೂರ್ಣ ಸಮ್ಮೇಳನ ಮಾಡುತ್ತಿದ್ದಾರೆ ಎಂದು ಖುಷಿಗೊಂಡೆ. ಅವರ ಬಗ್ಗೆ ಹೆಮ್ಮೆ ಕೂಡ ಅನಿಸಿತು. ಆದರೆ ಕೊಟ್ಟ ಅಲ್ಪ ಸಮಯದಲ್ಲಿಯೇ ಕನ್ನಡದ ಕುಲಗುರು ಶತಾಯುಷಿ ಡಾ. ಚನ್ನಬಸವ ಪಟ್ಟದ್ದೇವರ ಸಾಧನೆ, ಸಿದ್ಧಿಯನ್ನು ಒಂದು ಸಣ್ಣ ಕೃತಿಯಲ್ಲಿ ಹಿಡಿದಿಡುವುದು ಕಷ್ಟವೆನಿಸಿತು. ಆದರೆ ನನಗೆ ವಹಿಸಿದ ಜವಾಬ್ದಾರಿಯಿಂದ ಜಾರಿಕೊಳ್ಳಬಾರದು ಎಂದು ಹಠಕ್ಕೆ ಬಿದ್ದವರಂತೆ ಓದುತ್ತ, ಬರೆಯುತ್ತ ಹೋದಂತೆ ಗುರು ಚನ್ನಬಸವ ಪಟ್ಟದ್ದೇವರು ನನಗರಿವಿಲ್ಲದೆ ನನ್ನೊಳಗೆ ಪ್ರವೇಶ ಮಾಡಿದರು.

ಪೂಜ್ಯರನ್ನು ಕುರಿತು ಈಗಾಗಲೇ ಸಾಕಷ್ಟು ಜನ ಬರೆದಿದ್ದಾರೆ. ಆ ಎಲ್ಲ ಕೃತಿಗಳ ಸಿಂಹಾವಲೋಕನದಿಂದಾಗಿಯೇ ನನ್ನ ಈ ಕೃತಿಯನ್ನು ಬರೆಯಲು ಸಾಧ್ಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಭವ್ಯ, ಭ್ಯೂಮ ವ್ಯಕ್ತಿತ್ವ ಹೊಂದಿದ ಪೂಜ್ಯರನ್ನು ಕುರಿತು ನಾನೂ ಕೂಡ ಒಂದು ಕೃತಿ ಬರೆದಿದ್ದೇನೆ ಎಂಬುದೇ ನನ್ನ ಜೀವನದ ಭಾಗ್ಯ ಎಂದು ಭಾವಿಸಿದ್ದೇನೆ. ಇದನ್ನು ಆಗು ಮಾಡಿದ ಕನ್ನಡದ ಎಲ್ಲ ಮನಸ್ಸುಗಳಿಗೆ ನನ್ನ ಗೌರವದ ಶರಣುಗಳು.

–ವಿಜಯಲಕ್ಷ್ಮೀ ಶಿ. ಕೌಟಗೆ, ಬೀದರ್

ಕನ್ನಡದ ಪಟ್ಟದ್ದೇವರು
ಡಾ. ಚನ್ನಬಸವಪಟ್ಟದ್ದೇವರು

ಪ್ರವೇಶ:

ಜ್ಯೋತಿಯ ಮುಟ್ಟಿದ ಬತ್ತಿಯಲ್ಲ ಜ್ಯೋತಿಯಪ್ಪವಯ್ಯ
ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯ
ಪ್ರಸಾದವ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯ
ಲಿಂಗವ ಮುಟ್ಟಿದ ಅಂಗವೆಲ್ಲ ಲಿಂಗವಪ್ಪವಯ್ಯಾ
ಸಕಲೇಶ್ವರದೇವ ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯ

–ಸಕಲೇಶಮಾದರಸ

ಹನ್ನೆರಡನೇ ಶತಮಾನದಲ್ಲಿ ಈ ಧರೆಗಂಟಿದ್ದ ಅಸ್ಪೃಶ್ಯತೆ, ಅಸಮಾನತೆ, ಜಾತೀಯತೆ, ಮೂಢನಂಬಿಕೆ, ಕಂದಾಚಾರ ತೊಳೆದು ಮಡಿ ಮಾಡಿದ ಅಣ್ಣ ಬಸವಣ್ಣ ಹಾಕಿಕೊಟ್ಟ ಮಾರ್ಗದಲ್ಲಿಯೇ ೨೦ನೇ ಶತಮಾನದಲ್ಲಿ ಒಬ್ಬರು ಥೇಟ್ ಅವರಂತೆಯೇ ಬಾಳಿ, ಬದುಕಿ ತೋರಿದರು. ಬೀದರ್ ಜಿಲ್ಲೆಯ ಭಾಲ್ಕಿ ಹಿರೇಮಠದ ಪೂಜ್ಯಶ್ರೀ ಡಾ. ಚನ್ನಬಸವ ಪಟ್ಟದ್ದೇವರು. ಅವರು ಕೈಗೊಂಡ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕಾರ್ಯಗಳು ಇಂದು ಮನೆ ಮಾತಾಗಿವೆ.

ಭಾಲ್ಕಿ ಹಿರೇಮಠ ಸಂಸ್ಥಾನಕ್ಕೆ ಸುಮಾರು ಐದುನೂರು ವರ್ಷಗಳ ಇತಿಹಾಸ ಇರಬಹುದು. ಆದರೆ ಅದು ಸಮಾಜಮುಖಿಯಾಗಿ ಬೆಳೆದದ್ದು, ಶತಾಯುಷಿ ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರ (ಪಟ್ಟಾಧಿಕಾರ ೧೯೨೪) ಕಾಲಕ್ಕೆ. ಡಾ. ಚನ್ನಬಸವ ಪಟ್ಟದ್ದೇವರಿಗೆ ಬಸವಣ್ಣ ಬೇರೆ ಆಗಿರಲಿಲ್ಲ, ಕನ್ನಡ ಬೇರೆಯಾಗಿರಲಿಲ್ಲ. ಕನ್ನಡತ್ವ ಬಸವತತ್ವ ಉಭಯದೃಷ್ಟಿ

ಏಕವಾಗಿ ಕಾಣುವಂತೆ ಅಭೇದವಾಗಿ ಕಂಡವರು. ಸಮಾಜದದಲ್ಲಿ ಅಂತ್ಯಜರೆಂದು ಗುರುತಿಸಲ್ಪಡುವ ಕೆಳವರ್ಗದವರಿಗೆ, ದಲಿತರಿಗೆ ಲಿಂಗದೀಕ್ಷೆ ನೀಡಿದವರು. ಮೇಲಾಗಿ ಬರಗಾಲದಲ್ಲಿ ಅವರಿಗೆ ಶ್ರೀಮಠದ ಬಾವಿಯ ನೀರುಕೊಟ್ಟು ಮಾನವೀಯತೆ ಮೆರೆದದ್ದು ಅವರಲ್ಲಿರುವ ಸಮತ್ವ ದೃಷ್ಟಿಗೆ ಸಾಕ್ಷಿಯಾಗಿದೆ.

ನಿಜಾಮ ಆಡಳಿತ ಹಾಗೂ ಉರ್ದು ಭಾಷಾ ಪ್ರಾಬಲ್ಯದ ನಡುವೆ ಕನ್ನಡ ಶಾಲೆ ಆರಂಭಿಸಿರುವುದು, ಕರ್ನಾಟಕ ಏಕೀಕರಣ, ಹೈಕ ವಿಮೋಚನೆ ಸೇರಿದಂತೆ ಹಲವಾರು ನಾಡು- ನುಡಿಗೆ ಸಂಬಂಧಿಸಿದ ಜನಮುಖಿ ಚಳವಳಿಗಳಿಗೆ ಪ್ರೇರಕಶಕ್ತಿಯಾದವರು ಅವರು. ೧೨ನೇ ಶತಮಾನದಲ್ಲಿ ಬಸವಾದಿ ಶರಣರು ಬಸವಕಲ್ಯಾಣದಲ್ಲಿ ಸ್ಥಾಪಿಸಿದ್ದ ಅನುಭವ ಮಂಟಪ ಕಟ್ಟಡವನ್ನು ೨೦ನೇ ಶತಮಾನದಲ್ಲಿ ಪುನರ್ ನಿರ್ಮಾಣ ಮಾಡಿದ ಶ್ರೇಷ್ಠತೆ ಇವರಿಗೆ ಸಲ್ಲುತ್ತದೆ.

ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಈ ಭಾಗದ ಜನತೆಗೆ ಶಿಕ್ಷಣ ನೀಡುವುದು, ಅವರಲ್ಲಿ ಅರಿವು, ಜಾಗೃತಿ ಮೂಡಿಸುವುದು, ಬಸವಾದಿ ಶರಣರ ವಿಚಾರಗಳನ್ನು ಜನಮಾನಸಕ್ಕೆ ಮುಟ್ಟಿಸುವುದು, ಜಾತಿರಹಿತ ಸಮಾಜ ಕಟ್ಟುವುದು ಅವರ ಮೊದಲ ಆದ್ಯತೆಗಳಾಗಿದ್ದವು. ಹೀಗೆ ಹತ್ತು ಹಲವು ರಚನಾತ್ಮಕ ಕಾರ್ಯಯೋಜನೆಗಳ ಮೂಲಕ ಶ್ರೀಗಳು ಇಂದಿಗೂ ಜನಮಾನಸದಲ್ಲಿ ನೆಲೆನಿಂತಿದ್ದಾರೆ. ೧೨ನೇ ಶತಮಾನದಲ್ಲಿ ನಡೆದ ಕಲ್ಯಾಣದ ಕ್ರಾಂತಿಯ ನಂತರ ಮತ್ತೊಮ್ಮೆ ಕ್ರಾಂತಿಯನ್ನು ಮೊಳಗಿಸಿದ ಕೀರ್ತಿ ಪೂಜ್ಯ ಶ್ರೀ ಡಾ. ಚನ್ನಬಸವಪಟ್ಟದ್ದೇವರಿಗೆ ಸಲ್ಲುತ್ತದೆ.

ಕಾಯಕ ಪರಿಣಾಮಿ, ಕನ್ನಡದ ಕುಲಗುರು, ಗಂಡೆದೆಯ ಗುರು, ಅವಿಶ್ರಾಂತ, ಕಲ್ಯಾಣ ಕರ್ನಾಟಕದ ನಡೆದಾಡುವ ದೇವರು, ದಲಿತೋದ್ಧಾರಕ, ಶಿವಯೋಗಿ, ವಿನಯಭಂಡಾರಿ, ಅಪ್ಪಟ ಅಪರಂಜಿ ಎಂಬಿತ್ಯಾದಿ ಹೆಸರಿನಿಂದ ಕರೆಯಲ್ಪಡುವ ಪೂಜ್ಯಶ್ರೀ ಡಾ. ಚನ್ನಬಸವ ಪಟ್ಟದ್ದೇವರ ಬದುಕು, ಅವರು ಮಾಡಿದ ಕನ್ನಡದ ಸೇವೆ ಇವುಗಳೆಲ್ಲವೂ ಬಸವ ನೈವೇದ್ಯವಾಗಿವೆ ಎಂದು ಹೇಳಬಹುದಾಗಿದೆ. ಬಸವಾದಿ ಶರಣರ ಕನಸಿನ ಸಮತಾವಾದವನ್ನು

ಸಮಾಜದಲ್ಲಿ ನೆಲೆಗೊಳಿಸಿದ ಇವರು ನಿಜಕ್ಕೂ ಅಮೋಘ ಸಾಧಕರಾಗಿದ್ದಾರೆ. ಅವರು ನುಡಿದು ನಡೆದು ತೋರಿದ ಬದುಕು ನಮಗೆಲ್ಲರಿಗೂ ದಾರಿದೀಪವಾಗಿದೆ. ಅಸ್ಪೃಶ್ಯತೆ ನಿವಾರಣೆ ಅವರ ಬದುಕಿನ ಉಸಿರಾಗಿತ್ತು. ಬಸವತತ್ವ ಪ್ರಸಾರ ಜೀವನದ ಅವಿಭಾಜ್ಯ ಅಂಗವಾಗಿತ್ತು. ಅನುಭವ ಮಂಟಪ ಕಟ್ಟಡ ಅವರ ಕನಸಾಗಿತ್ತು. ಅವರು ಕಂಡ ಕನಸುಗಳು ನನಸಾಗಿವೆ. ಇಂಥ ಮಹಾನುಭಾವರನ್ನು ನೆನೆಯುವುದೇ ನಮ್ಮ ಭಾಗ್ಯವಾಗಿದೆ. ಅವರ ಜೀವನ ಸಾಧನೆಯನ್ನು ಒಂದು ಲೇಖನದಲ್ಲಿ ಇಲ್ಲವೇ ಕೃತಿಯಲ್ಲಿ ಹಿಡಿದಿಡಲು ಸಾಧ್ಯವಿಲ್ಲ.

ಅರಿವು ಆಚಾರಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದ ಪೂಜ್ಯರು ಪಕ್ಕಾ ಪರಿಸರವಾದಿಗಳೂ ಆಗಿದ್ದರು. ಯಾರಾದರೂ ಮರ ಕಡಿಯುವುದು, ಬಾಹ್ಯ ಪರಿಸರ ಹಾಳು ಮಾಡಿದರೆ ಕೆಂಡಾಮಂಡಲವಾಗುತ್ತಿದ್ದರು. ಮಠದ ಆವರಣದಲ್ಲಿ ಯಾರಾದರೂ ಎಲೆ ತಿಂದು ಉಗುಳಿದರೆ ಕೋಪದಿಂದ ಕುದಿಯುತ್ತಿದ್ದರು. ಬಿರುಕು ಬಿಟ್ಟ ಸಂಸಾರಗಳನ್ನು ಒಂದು ಮಾಡುವಲ್ಲಿ ಸಹ ಅವರು ಹಿಂದೆ ಬಿದ್ದಿರಲಿಲ್ಲ. ಬಸವತತ್ವವನ್ನು ಅಕ್ಷರಶಃ ಪಾಲಿಸಿದ ಕರ್ನಾಟಕದ ಕೆಲವು ಅಗ್ರಗಣ್ಯ ಮಠಗಳಲ್ಲಿ ಭಾಲ್ಕಿ ಹಿರೇಮಠವೂ ಒಂದು ಎನ್ನುವಂತೆ ಬಸವತ್ವದ ಭದ್ರ ಬುನಾದಿ ಹಾಕಿ ಹೋಗಿದ್ದಾರೆ. ಬಹುದೇವೋಪಾಸನೆ, ಸ್ಥಾವರಲಿಂಗ ಪೂಜೆಯನ್ನು ಅವರು ತೀವ್ರವಾಗಿ ವಿರೋಧಿಸುತ್ತಿದ್ದರು. ಅಂತೆಯೇ ಬೀದರ್ ಜಿಲ್ಲೆಯಲ್ಲಿ ಬಹುತೇಕ ಇಂದಿಗೂ ಜಗುಲಿ ಸಂಸ್ಕೃತಿ ಇಲ್ಲ. ಬಹುದೇವೋಪಾಸನೆ ಅಷ್ಟೊಂದಾಗಿ ಇಲ್ಲ. ಜಿಲ್ಲೆಯ ಬಹುತೇಕ ಲಿಂಗಾಯತರು ತಮ್ಮ ವಿವಾಹ, ನಾಮಕರಣ, ಕುಪ್ಪಸ ಮುಂತಾದ ಕಾರ್ಯಕ್ರಮಗಳನ್ನು ಬಸವತತ್ವದ ಮೂಲಕವೇ ಆಚರಿಸುತ್ತಾರೆ. ಹೀಗೆ ಜಿಲ್ಲೆಯ ಧಾರ್ಮಿಕ, ಶೈಕ್ಷಣಿಕ, ಸಮಾಜಿಕ ಕ್ಷೇತ್ರಗಳನ್ನು ತಮ್ಮ ಶರಣಾಮೃತದಿಂದ ಶುದ್ಧೀಕರಿಸಿದ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ಕನ್ನಡದ ಕಲಿಗಳಾಗಿ ಕಂಗೊಳಿಸುತ್ತಾರೆ.

1. ಜನನ ಮತ್ತು ಬಾಲ್ಯ:

ಕರ್ನಾಟಕದ ಮುಕುಟವೆಂದೇ ಕರೆಯಲ್ಪಡುವ ಬೀದರ್ ಜಿಲ್ಲೆ ಸ್ವಾತಂತ್ರ್ಯ ಪೂರ್ವದಲ್ಲಿ ಅತ್ಯಂತ ದೊಡ್ಡ ಜಿಲ್ಲೆಯಾಗಿತ್ತು. ಬೀದರ್ ಜಿಲ್ಲೆಯು ಹಿಂದುಳಿದ ಜಿಲ್ಲೆಯೆಂದು ಹೇಳಲಾಗುತ್ತಿದ್ದರೂ ಕಲ್ಯಾಣವನ್ನು ಕೈಲಾಸವನ್ನಾಗಿಸಿದ ಸಾಂಸ್ಕೃತಿಕ ಇತಿಹಾಸ ಈ ಜಿಲ್ಲೆಗಿದೆ. ಆದರೆ ಈ ಜಿಲ್ಲೆಯಲ್ಲಿಯೇ ಅತ್ಯಂತ ಹಿಂದುಳಿದ ತಾಲ್ಲೂಕು ಔರಾದ್ (ಬಿ) ತಾಲ್ಲೂಕು ಕೇಂದ್ರವಾಗಿತ್ತು. ಹೈದರಾಬಾದ್ ನಿಜಾಮನ ಆಡಳಿತಾವಧಿಯಲ್ಲಿ ಕಮಲಾನಗರ ಎಂದು ಕರೆಯಲ್ಪಡುತ್ತಿದ್ದ ಈ ಗ್ರಾಮಕ್ಕೆ ಹಿಂದೆ ಹಿರೇಮುರುಗ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಇದರ ಪಕ್ಕದಲ್ಲಿ ಚಿಕ್ಕಮುರುಗ ಎಂಬ ಗ್ರಾಮವೂ ಇದೆ. ಕೃಷಿ ಪ್ರಧಾನವಾದ ಹಿರೇಮುರುಗ ಗ್ರಾಮದಲ್ಲಿ ಕೆಲವೇ ಕೆಲವು ಜನರಿಗೆ ಮಾತ್ರ ಹೊಲ ಮನೆಗಳಿದ್ದವು. ಉಳಿದವರು ಕೂಲಿ ನಾಲಿ ಮಾಡಿ ಬದುಕುತ್ತಿದ್ದರು. ಆಗಿನ ಕಾಲದಲ್ಲಿ ಸಾಮಾನ್ಯವಾಗಿ ಕಿತ್ತು ತಿನ್ನುವ ಬಡತನ ಎಲ್ಲರನ್ನು ಕಾಡುತ್ತಿತ್ತು. ಮನುಷ್ಯ ಬದುಕಿಗೆ ಅಗತ್ಯವಾದ ಕುಡಿವ ನೀರು, ರಸ್ತೆ, ಅನ್ನ, ಆಹಾರ ಸಿಗುವುದು ಆಗಿನ ಕಾಲದಲ್ಲಿ ದುಸ್ತರವಾಗಿತ್ತು. ಒಟ್ಟಾರೆಯಾಗಿ ಹೇಳಬೇಕಾದರೆ ಮೂಲ ಸೌಕರ್ಯಗಳಿಂದ ವಂಚಿತವಾದ ಗ್ರಾಮ ಅದಾಗಿತ್ತು. ಯಾವುದೇ ಸಂಪರ್ಕ-ಸಂವಹನಗಳಿಲ್ಲದೆ ಕುಗ್ರಾಮ ಎಂಬ ಅಭಿದಾನ ಪಡೆದಿತ್ತು ಈ ಗ್ರಾಮ.

ಇಂತಹ ಕುಗ್ರಾಮದಲ್ಲಿ ೧೯ನೇ ಶತಮಾನದಲ್ಲಿ ಬುಳ್ಳಾ ಎಂಬ ಲಿಂಗಾಯತ ಮನೆತನ ವಾಸವಿತ್ತು. ಈ ಮನೆಯಲ್ಲಿ ಸಂಗಮ್ಮ -ರಾಚಪ್ಪ ಎಂಬ ದಂಪತಿ ಜೀವಿಸುತ್ತಿದ್ದರು. ಅವರು ವೃತ್ತಿಯಿಂದ ಒಕ್ಕಲುತನ ಮಾಡುತ್ತಿದ್ದರು. ಪ್ರವೃತ್ತಿಯಿಂದ ಶಿವಭಕ್ತರಾಗಿದ್ದರು. ನಿತ್ಯ ಶಿವಧ್ಯಾನ, ಶಿವಚಿಂತೆಯಲ್ಲಿ ತೊಡಗುತ್ತಿದ್ದರು. ಅವರಿಗೆ ಒಂಭತ್ತು ಕಂಬವುಳ್ಳಮನೆಯಿತ್ತು. ಆದರೆ ಬಡತನ ಅವರ ಮನೆಯಲ್ಲಿ ಶಾಶ್ವತವಾಗಿ ಮನೆ ಮಾಡಿತ್ತು. ಮನೆಗೆ ಅಗತ್ಯವಾದ ಪಾತ್ರೆ, ಪಗಡೆಗಳು ಇರಲಿಲ್ಲ. ಬಡತನವನ್ನೇ ಹಾಸಿ ಹೊದ್ದು ಮಲಗುವ ಸ್ಥಿಯಲ್ಲಿದ್ದರು ಅವರು. ಆದರೆ ಇವರಿಬ್ಬರ ದಾಂಪತ್ಯ ಮಾತ್ರ ಅನ್ಯೋನ್ಯವಾಗಿತ್ತು. ಮನೆ ನೋಡಾ ಬಡವರು, ಮನ ನೋಡಾ ಘನ, ಮನ ಸಂಪನ್ನರು ಎಂಬಂತಿದ್ದರು ಅವರು. ಇವರ ಉದರದಿಂದ ಇಬ್ಬರು

ಮಕ್ಕಳು ಹುಟ್ಟಿದರು. (ಒಂದು ಹೆಣ್ಣು ಮತ್ತು ಒಂದು ಗಂಡು ಮಗು) ಮೊದಲ ಮಗು ಹೆಣ್ಣು ಈಕೆಯ ಬಗ್ಗೆ ಅಷ್ಟೊಂದು ಮಾಹಿತಿ ದೊರೆಯುವುದಿಲ್ಲ.

ನಾಲ್ಕಾರು ವರ್ಷದ ನಂತರ ಸಂಗಮ್ಮ ಮತ್ತೆ ಗರ್ಭವತಿಯಾದರು. ತಮ್ಮ ಉದರದಿಂದ ಈ ಬಾರಿ ಗಂಡು ಮಗುವೆ ಮೈವೆತ್ತಿ ಬರಲಿದೆ ಎಂದು ಕನಸು ಆ ದಂಪತಿ ಕನಸು ಕಾಣುತ್ತಿದ್ದರು. ಅಂದಂತೆ ೨೨-೧೨-೧೯೮೦ರಂದು ಗಂಡು ಮಗು ಹುಟ್ಟಿತು. ತಮ್ಮ ಉದರದಿಂದ ಬಸವಣ್ಣ, ಚೆನ್ನಬಸವಣ್ಣನೇ ಹುಟ್ಟಿ ಬಂದಿದ್ದಾನೆ ಎಂದು ಸಂತಪಟ್ಟರು. ಇವನು ಮಹಾಜ್ಞಾನಿಯಾಗುತ್ತಾನೆ ಎಂದರು ಕೆಲವರು, ಇನ್ನೂ ಕೆಲವರು ಇವನು ನಮ್ಮ ನಾಡಿನ ಸಿರಿಯಾಗುತ್ತಾನೆ ಎಂದು ಹೇಳಿದರು. ಇದೆಲ್ಲದರ ಮಧ್ಯೆ ಹೀಗೊಂದು ದಿನ ಈ ಮಗುವಿಗೆ ಮಹಾರುದ್ರ ಎಂದು ನಾಮಕರಣ ಮಾಡಿದರು.

ತಂದೆ-ತಾಯಿಗಳ ಕನಸಿನಂತೆ, ಊರಿನವರ ಮಾತಿನಂತೆ ಮಗು ಬಾಲ್ಯದಲ್ಲಿಯೇ ಬೆಳವ ಸಿರಿ ಮೊಳಕೆಯಲ್ಲಿ ಎನ್ನುವಂತೆ ತನ್ನ ಬೆರಗನ್ನು ತೋರಿಸತೊಡಗಿತು. ಮಗು ಒಮ್ಮೊಮ್ಮೆ ಚಕ್ಕಂದವಾಟವಾಡುತ್ತಿದ್ದರೆ, ಮಗದೊಮ್ಮೆ ಧ್ಯಾನಸ್ಥ ಸ್ಥಿತಿಯಲ್ಲಿ ಮಹಾಮೌನಿಯಾಗಿ ಕುಳಿತುಕೊಳ್ಳುತ್ತಿತ್ತು. ಇದನ್ನು ಕಂಡ ತಂದೆ-ತಾಯಿಗಳಿಗೆ ಒಮ್ಮೊಮ್ಮೆ ದಿಗಿಲಾಗುತ್ತಿತ್ತು. ಇದ್ದೊಬ್ಬ ಮಗ ಹೀಗೇಕೆ? ಎಂದು ಅವರು ಚಿಂತಿಸತೊಡಗಿದರು.

ಕಮಲಾನಗರದಲ್ಲಿ ಒಮ್ಮೆ ಗಡ್ಡೆ ಬೇನೆ (ಪ್ಲೇಗ್ ರೋಗ) ಬಂದು ಜನರೆಲ್ಲರೂ ಒಮ್ಮಿಂದೊಮ್ಮೆಲೆ ಸಾವನ್ನಪ್ಪುತ್ತಿದ್ದರು. ಗಡ್ಡೆ ರೋಗ ಬಂದವರೆಲ್ಲ ಪಟಪಟನೆ ಪ್ರಾಣ ಬಿಡ ತೊಡಗಿದರು. ಪ್ರತಿ ನಿತ್ಯ ಎಷ್ಟು ಜನ ಪ್ರಾಣ ಬಿಡುತ್ತಿದ್ದಾರೆ ಎಂದು ಎಣಿಸುವುದೇ ಕಷ್ಟವಾಯಿತು. ಸತ್ತವರನ್ನು ಎತ್ತಿ ಕುಣಿಗೆ ಹಾಕುವುದೇ ದುಸ್ತರ ಎನ್ನುವಂತಾಯಿತು. ಸದಾ ಶಿವಧ್ಯಾನ, ಶಿವ ಚಿಂತೆಯಲ್ಲಿ ಮುಳುಗಿದ ಬುಳ್ಳಾ ಮನೆಯತನಕ್ಕೂ ಈ ಪ್ಲೇಗ್ ಮಹಾಮಾರಿ ಕಾಲಿಟ್ಟಿತು. ಈ ವೇಳೆಯಲ್ಲಿಯೇ ಸಂಗಮ್ಮ-ರಾಚಪ್ಪ ದಂಪತಿ ಪ್ಲೇಗ್ ರೋಗ ಬಂದು ಇನ್ನಿಲ್ಲವಾಗುತ್ತಾರೆ.

ಹೀಗೆ ಮಹಾರುದ್ರ ಮತ್ತು ಮಹಾರುದ್ರನ ಅಕ್ಕ ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾಗಿ ಉಳಿಯುತ್ತಾರೆ. ಆಗ ಕೆಲವರು ಈ ಮಗು ಹುಟ್ಟಿದ ಘಳಿಗೆ ಸರಿ ಇಲ್ಲ. ಇದು ಅಪಶಕುನದ ಮಗು. ತಾ ಹುಟ್ಟಿ ತಂದೆ-ತಾಯಿಯ ಜೀವ ಕಸಿದುಕೊಂಡ ಪಾಪದ ಮಗು, ಮಹಾಪಾಪಿ ಎಂದು ಮಗುವನ್ನು ಮೂದಲಿಸತೊಡಗುತ್ತಾರೆ. ತಂದೆ-ತಾಯಿಯನ್ನು ಕಳೆದುಕೊಂಡು ಅನಾಥನಾದ ಮಹಾರುದ್ರನನ್ನು ಊರವರೆಲ್ಲರೂ ಕೂಡಿ ಕಮಲಾನಗರದ ಮಠದಲ್ಲಿ ಸೇರಿಸಿ ಬಿಡುತ್ತಾರೆ. ಮಹಾರುದ್ರ ಮಠ ಸೇರಿದಾಗಿನಿಂದ ಮಠದ ಅಂಗಳ ಸ್ವಚ್ಛಗೊಳಿಸುವುದು, ಮಠದ ದನಗಳ ಜೊತೆಗೆ ಊರ ದನಗಳನ್ನು ಕಾಯುವುದು, ದನದ ಸೆಗಣಿ ಬಳಿಯುವುದು, ಕಂತೆ ಬಿಕ್ಷೆ ಬೇಡುವ ಕಾಯಕ ಮಾಡುತ್ತಿದ್ದ. ಕಾಯಕವೇ ಕೈಲಾಸ ಎಂದು ಬಗೆದಿದ್ದ ಅವರು ಎಲ್ಲ ಬಗೆಯ ಕೆಲಸವನ್ನು ಮಾಡುತ್ತಿದ್ದರು. ಯವುದಕ್ಕೂ ಹಿಂಜರಿಕೆ, ಹೇವರಿಕೆ, ಬೇಸರ ಮಾಡಿಕೊಳ್ಳುತ್ತಿರಲಿಲ್ಲ.

2. ಓದು-ವಿದ್ಯಾಭ್ಯಾಸ:

ಬಡತನದ ವಾತಾವರಣದಲ್ಲಿಯೇ ಏನಾದರೂ ಸಾಧನೆ ಮಾಡುವ ಬಯಕೆ ತೀವ್ರವಾಗಿರುತ್ತದೆ ಎನ್ನುವ ಮಾತು ಸುಳ್ಳಲ್ಲ. ಪ್ರತಿಯೊಬ್ಬರ ಹುಟ್ಟು ಆಕಸ್ಮಿಕವಾಗಿದ್ದರೂ ಏನಾದರೊಂದು ಮಹತ್ಸಾಧನೆಗೆ ಹಾತೊರೆಯುತ್ತಿರುತ್ತದೆ. ಅದರಂತೆ ಮಹಾರುದ್ರ ತನ್ನ ಈ ಬಿಡುವಿಲ್ಲದ ಕಾಯಕದ ಜೊತೆಗೆ ತಾನೂ ಓದಿ ಶಾಣ್ಯಾ ಆಗಬೇಕೆಂಬ ಉತ್ಕಟವಾದ ಬಯಕೆ ಹೊಂದಿದ್ದರು. ಹೀಗಾಗಿ ಓದುವುದನ್ನು ಪ್ರಾರಂಭಿಸಿದ. ಆದರೆ ಮಠದ ಸ್ವಾಮಿಗಳಾದ ಶಂಕ್ರಯ್ಯನವರಿಗೆ ಈ ಹುಡುಗ ಓದಿ ಅದೇನು ಸಾಧಿಸುತ್ತಾನೆ. ನೀನು ಓದುವುದು ಬೇಡ, ಓದಿ ಅದೇನು ಮಹಾ ಸಾಧನೆ ಮಾಡುತ್ತೀ? ಎಂದು ಹೇಳುತ್ತಿದ್ದರು. ಆದರೆ ಓದುವ ಹಂಬಲವಿದ್ದ ಮಹಾರುದ್ರ ಮಾತ್ರ ಗುರುಗಳ ಮಾರುಗಳನ್ನು ಕಿವಿಯಲ್ಲಿ ಹಾಕಿಕೊಳ್ಳದೆ ಮಠದ ಸಮೀಪವಿದ್ದ ಕಿರಾಣಿ ಅಂಗಡಿ ಮಾಲೀಕರಾದ ಶಿವಮೂರ್ತಿ ಎಂಬುವವರ ಬಳಿ ತುಸು ಮರಾಠಿ ಭಾಷೆ ಕಲಿತ. ಗುರು ಸಿದ್ದರಾಮಯ್ಯ ಎಂಬುವವರು ಮಹಾರುದ್ರನಿಗೆ ಮೋಡಿ ಲಿಪಿಯಲ್ಲಿ ಕನ್ನಡವನ್ನು ಓದಿಸಿದರು. ಮರಾಠಿ ಹಾಗೂ ಉರ್ದು ಭಾಷೆಯ ಪ್ರಾಭಲ್ಯವಿರುವ ಆ ಕಾಲದಲ್ಲಿ ಕನ್ನಡ ಭಾಷೆ ಕಲಿಯುವುದು ಹಾಗೂ

ಓದುವುದು ಮಹಾ ಅಪರಾಧವಾಗಿತ್ತು. ಇದೇ ವೇಳೆಯಲ್ಲಿಯೇ ಗುರುಗಳು ಮಹಾರುದ್ರನಿಗೆ "ಚನ್ನಬಸವ" ಎಂದು ಮರು ನಾಮಕರಣ ಮಾಡಿದರು. ಅಲ್ಲಿಂದಲೇ ಶುರುವಾಯ್ತು ಮಹಾರುದ್ರನ ಜ್ಞಾನಯಾಗ.

ಒಮ್ಮೆ ಮುಧೋಳ ವಿರಕ್ತಮಠದ ಗುರುಗಳಾದ ಶಿವಲಿಂಗೇಶ್ವರರು ಕಮಲಾನಗರಕ್ಕೆ ಭೇಟಿ ನೀಡಿದ್ದರು. ಕಂತೆ ಬಿಕ್ಷೆಗೆ ತೆರಳಿದ್ದ ಚನ್ನಬಸವನ ಕಾಂತಿಯುಕ್ತ ಮುಖವನ್ನು ಕಂಡ ಗುರುಗಳು, ಯಾರಪ್ಪ ನೀನು ಎಂದು ಪ್ರಶ್ನಿಸಿದ್ದರು. ಶಿವಲಿಂಗೇಶ್ವರರನ್ನು ಭೇಟಿಯಾದ ಚನ್ನಬಸವ ತನ್ನ ಇತಿ ವೃತ್ತಾಂತ ತಿಳಿಸಿದ. ತಾನು ವಿದ್ಯೆ ಕಲಿಯುವ ಉತ್ಸುಕತೆಯನ್ನು ಅವರ ಮುಂದಿಟ್ಟ. ತನ್ನನ್ನು ಮುಧೋಳಕ್ಕೆ ಕರೆದುಕೊಂಡು ಹೋಗಿರಿ ಎಂದು ಭಿನ್ನವಿಸಿಕೊಂಡ. ನಿಮ್ಮ ಸ್ವಾಮಿಗಳು ಒಪ್ಪಿದರೆ ನನ್ನದೇನು ಅಭ್ಯಂತರವಿಲ್ಲ ಎಂದು ತಿಳಿಸಿದ ಅವರು, ನಿಮ್ಮ ಗುರುಗಳ ಒಪ್ಪಿಗೆ ಪಡೆದುಕೊಂಡು ಬಾ ಎಂದು ಹೇಳಿ ಕಳಿಸಿದರು. ಆಗ ಶಂಕ್ರಯ್ಯ ಸ್ವಾಮಿಗಳು ಇದಕ್ಕೆ ಒಪ್ಪಲಿಲ್ಲ. ಹೀಗಾಗಿ ಕಮಲಾನಗರದ ಮಠವನ್ನು ಬಿಡಬೇಕು ಎಂಬ ನಿರ್ಧಾರಕ್ಕೆ ಬಂದ ಚನ್ನಬಸವ ಭಾಲ್ಕಿಯ ಹಿರೇಮಠಕ್ಕೆ ಬಂದು ತನ್ನ ಪರಿಚಯ ಹೇಳಿಕೊಂಡು ಓದುವ ಹಂಬಲ ತೋರ್ಪಡಿಸಿದರು. ಇದೇ ಸಂದರ್ಭದಲ್ಲಿ ಅಲ್ಲಿಗೆ ಬಿನ್ನಹಕ್ಕೆ ಬಂದಿದ್ದ ಮುಧೋಳದ ಶಿವಲಿಂಗೇಶ್ವರರು, ಭಾಲ್ಕಿ ಹಿರೇಮಠದ ಗುರುಗಳಾದ ಸಿದ್ದಬಸವರ ಇಚ್ಛೆಯಂತೆ ಚೆನ್ನಬಸವನನ್ನು ಮುಧೋಳಕ್ಕೆ ಕರೆದುಕೊಂಡು ಬಂದರು.

ಈ ಮಠದಲ್ಲಿರುವಾಗಲೇ ಚನ್ನಬಸವರು ಕಲ್ಲಿನ ಪಾಟಿಯ ಮೇಲೆ ತಿದ್ದಿ ತೀಡಿ ಎಲ್ಲ ಬಗೆಯ ಬರವಣಿಗೆ ಕಲಿತುಕೊಂಡರು. ಶಾಸ್ತ್ರ, ಪುರಾಣಗಳ ಅಧ್ಯಯನ ಮಾಡಿದರು. ಇಲ್ಲಿಯೇ ಅರಿವು, ಆಚಾರ ಪಡೆದುಕೊಂಡರು. ಚೆನ್ನಬಸವರ ಸೇವೆಯಿಂದ ಸಂತುಷ್ಟರಾದ ಮುಧುವಳೇಶ್ವರ ಶಿವಲಿಂಗೇಶ್ವರರು ಚನ್ನಬಸವನನ್ನು ಹೆಚ್ಚಿನ ಓದಿಗಾಗಿ ಔರಾದ (ಬಿ) ಯ ಅಂದಿನ ಅಮರವಾಡಿಯ ನಾಡೋಜರಾಗಿದ್ದ ಕೇದಾರ ಗಳಂಗಪ್ಪನವರ ಹತ್ತಿರ ಕಳಿಸಲು ನಿರ್ಧರಿಸಿದರು. ಗುರುವಿನ ಆಜ್ಞೆ ಹೊತ್ತು ಅಮರವಾಡಿಗೆ ಔರಾದ (ಬಿ) ಬಂದರು. ತಮಗೆ ವಹಿಸಿದ್ದ ಜವಾಬ್ದಾರಿಯನ್ನು ತುಂಬಾ ಅಚ್ಚುಕಟ್ಟಾಗಿ ನಿಭಾಯಿಸಬಲ್ಲವರಾಗಿದ್ದರು. ಕೇದಾರ ಗಳಂಗಳಪ್ಪನವರು ಸಹ ಸಣ್ಣ

ವ್ಯಕ್ತಿಯಾಗಿರಲಿಲ್ಲ. ಕನ್ನಡದ ಅಳಿಗಾಲ ಕಂಡು ಒಳಗೊಳಗೆ ನೊಂದು ಬೆಂದು ಕನ್ನಡದ ಏಳಿಗೆಗೆ ಪಣ ತೊಟ್ಟವರಾಗಿದ್ದರು. ಕನ್ನಡದ ಹಸಿವಿಟ್ಟುಕೊಂಡು ಬಂದಿದ್ದ ಚನ್ನಬಸವನಿಗೆ ಕನ್ನಡ ನುಡಿಯನ್ನು ಉಣಬಡಿಸಿದರು.

ಅಮರವಾಡಿಯ ಅಮರೇಶ್ವರ ಗುಡಿಯ ಶಾಲೆಯಲ್ಲಿಯೇ ತನ್ನ ಸಹಪಾಠಿಗಳಾದ ಬಸವಲಿಂಗಯ್ಯ, ರಾಚಯ್ಯ ಎಂಬುವವರ ಜೊತೆ ಸೇರಿ ಷಡಕ್ಷರಿ ಕವಿಯ ಶಬರಶಂಕರವಿಳಾಸ, ರಾಜಶೇಖರ ವಿಳಾಸ, ವೃಷಭೇಂದ್ರವಿಜಯ ಮುಂತಾದ ಕೃತಿಗಳನ್ನು ಓದಿದರು. ಅವುಗಳೆಲ್ಲವನ್ನು ಹೃದ್ಗತ ಮಾಡಿಕೊಂಡರು. ತಮ್ಮ ಬದುಕಿಗೆ ಧಾರ್ಮಿಕ ಹಾಗೂ ಅಧ್ಯಾತ್ಮದ ತಳಹದಿ ಕಟ್ಟಿಕೊಂಡರು. ಓದಿನ ಉನ್ನತ ಶಿಖರವೇರುತ್ತಿದ್ದ ಚನ್ನಬಸವರಿಗೆ ಭಾಲ್ಕಿ ಹಿರೇಮಠದಿಂದ ಆಗ ಒಂದು ಸುದ್ದಿ ಬಂದಿತು. ಇನ್ನು ಮುಂದೆ ಚನ್ನಬಸವರ ಓದಿನ ಖರ್ಚನ್ನು ಮಠ ಪೂರೈಸಲು ಆಗುವುದಿಲ್ಲವೆಂದು! ಈ ಸುದ್ದಿ ಕೇಳಿದ ಚನ್ನಬಸವರ ಎದೆ ಹೊಡೆದು ಹೋಯಿತು. ಮುಂದೆ ಏನು ಮಾಡಬೇಕು ಎಂಬುದು ಹೊಳೆಯಲಿಲ್ಲ. ಕ್ಷಣ ಹೊತ್ತು ಅವರ ಜಂಘಾಬಲವೇ ಕುಸಿದು ಹೋಯಿತು.

ಅಮರವಾಡಿಯಲ್ಲಿ ಆಗ ಒಂದು ವಸತಿ ಶಾಲೆ ಇದ್ದಿತು. ಅದು ಕಂತೆ ಭಿಕ್ಷೆಯ ಮೇಲೆ ನಡೆಯುವ ಶಾಲೆಯಾಗಿತ್ತು. ಆ ಶಾಲೆಯ ಕಾಯಕದ ಆಳು ಕೈಕೊಟ್ಟು ಓಡಿ ಹೋಗಿದ್ದನು. ಆ ಜಾಗಕ್ಕೆ ಚನ್ನಬಸವ ಸೇರಿಕೊಂಡನು. ಉಣ್ಣಲಿಕ್ಕೆ ಅನ್ನ, ಮಲಗಲಿಕ್ಕೆ ವಸತಿಶಾಲೆ, ಖರ್ಚಿಗೆ ವೇತನ ಸಿಕ್ಕ ಕೂಡಲೇ ಚನ್ನಬಸವರ ಓದಿನ ಬಂಡಿ ಮತ್ತಷ್ಟು ತೀವ್ರಗೊಂಡಿತು. ಇಲ್ಲಿದ್ದುಕೊಂಡು ಅಧ್ಯಯನ ಮಾಡಿದ್ದರಿಂದ ಕನ್ನಡದ ಪಾಂಡಿತ್ಯ ಅವರಿಗೆ ಒದಗಿ ಬಂದಿತ್ತು. ಇದು ಅವರ ಸಂತೋಷವನ್ನು ಹೆಚ್ಚಿಸಿತ್ತು.

ಆಗ ಮೈಸೂರಿನಿಂದ ಹೊರ ಬರುತ್ತಿದ್ದ ಮೈಸೂರು ಸ್ಟಾರ್ ಪತ್ರಿಕೆಯನ್ನು ಕದ್ದು ಓದುತ್ತಿದ್ದರು. ಆ ಪತ್ರಿಕೆಯಲ್ಲಿ ಧರ್ಮ, ಆಧ್ಯಾತ್ಮದ ಜೊತೆಗೆ ಇತರೆ ವಿಷಯಗಳಿರುತ್ತಿದ್ದವು. ರಾವಬಹಾದ್ದೂರ್ ಮುಂತಾದ ಮುಖಂಡರು ಆ ಪತ್ರಿಕೆಗೆ ಬೆನ್ನೆಲುಬಾಗಿ ನಿಂತಿದ್ದರು. ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಬಸವಾದಿ ಶರಣರ ವಿಚಾರಧಾರೆ ಚಿಂತನ, ಮಂಥನ ಮುಂತಾದ ಲೇಖನಗಳು ತುಂಬಾ ಹಿಡಿಸಿದವು.

3. ಗುರು, ಲಿಂಗ, ಜಂಗಮ ಸೇವೆ:

ಒಮ್ಮೆ ಪೂಜ್ಯ ಶಿವಲಿಂಗೇಶ್ವರರು ಖೇಡ ಸಂಗಮದಲ್ಲಿ ಅನುಷ್ಠಾನ ಕೈಗೊಂಡಿದ್ದರು. ಆಗ ಚನ್ನಬಸವ ಗುರುಗಳ ಬೇಕು, ಬೇಡಗಳನ್ನು ಪೂರೈಸಿದ. ಗುರುಗಳ ಮನಸ್ಸಿಗೆ ತೃಪ್ತಿಯಾಗುವಂತೆ ಸೇವೆಗೈದು ಅವರ ಮನಗೆದ್ದರು. ತನ್ನ ವಿದ್ಯಾಭ್ಯಾಸದ ಜೊತೆಗೆ ಗುರುಗಳ ಸೇವೆ ಮಾಡುತ್ತಿರುವಾಗ ಭಾಲ್ಕಿ ಹಿರೇಮಠದ ಗುರು ಸಿದ್ಧಬಸವರು ಇಸುಬು ರೋಗದಿಂದ ತೀರಾ ಜರ್ಜರಿತಗೊಂಡಿದ್ದರು. ಅಲ್ಲಿರುವ ವಿದ್ಯಾರ್ಥಿಗಳು ಅವರ ಆರೈಕೆ ಮಾಡಲು ಹಿಂಜರಿಯುತ್ತಿದ್ದರು. ಇನ್ನೇನು ನಾನು ಉಳಿಯುವುದಿಲ್ಲ ಎಂದು ಆ ಬೇನೆಯಲ್ಲಿಯೇ ತಮ್ಮ ಕೊನೆಯ ದಿನಗಳನ್ನು ಅವರು ಎಣಿಸುತ್ತಿದ್ದರು. ಈ ವಿಷಯ ಅರಿಯುತ್ತಲೇ ತೀರಾ ಕಳವಳಕ್ಕೀಡಾದ ಚೆನ್ನಬಸವರು ಭಾಲ್ಕಿ ಮಠಕ್ಕೆ ಬಂದು ಗುರುಗಳಿಗೆ ಔಷಧೋಪಚಾರದ ಸೇವೆ ಮಾಡಿದರು. ಗುರುಗಳ ಆರೈಕೆ ಚೆನ್ನಾಗಿ ಮಾಡಿದರು. ಇದರಿಂದಾಗಿ ಗುರುಗಳಿಗೆ ಬಂದಿದ್ದ ಇಸುಬು ರೋಗ ಸ್ವಲ್ಪ ಕಡಿಮೆಯಾಯಿತು.

ಕಮಲಾನಗರದ ಸಮೀಪದಲ್ಲಿರುವ ಡಿಗ್ಗಿ ಎಂಬ ಗ್ರಾಮದಲ್ಲಿ ಒಮ್ಮೆ ಗಡ್ಡೆ ಬೇನೆಯ ಹಾವಳಿ ಪ್ರಾರಂಭವಾಯಿತು. ಈ ರೋಗ ಎಷ್ಟು ಉಲ್ಬಣಗೊಂಡಿತ್ತೆಂದರೆ ಇಲಿ, ನಾಯಿ, ಬೆಕ್ಕುಗಳೂ ಈ ರೋಗಕ್ಕೆ ತುತ್ತಾಗಿ ಸಾವನ್ನಪ್ಪಿದವು. ಇಲಿ, ಬೆಕ್ಕು, ನಾಯಿಗಳ ಮೈಮೇಲಿನ ಹೇನು ಕಡಿದು ಮನುಷ್ಯರು ಸಹ ಈ ರೋಗಕ್ಕೆ ತುತ್ತಾಗಿ ಉಳಿದ ಪ್ರಾಣಿಗಳಂತೆ ಪಟಪಟನೆ ಸಾಯಲಾರಂಭಿಸಿದರು. ಸತ್ತವರಿಗೆ ಶವ ಸಂಸ್ಕಾರ ಮಾಡಲು ಸಹ ಜನ, ಜಾಗ ಇರದಂತಾಯಿತು. ಶವಗಳನ್ನು ಕುಣಿ ತೋಡಿ ಇಡಲು ಸಹ ಆಗಲಿಲ್ಲ. ಇಂತಹ ಭೀಕರ ಸಂದರ್ಭದಲ್ಲಿ ಚನ್ನಬಸವರು ಆ ಗ್ರಾಮದಲ್ಲಿ ಬಂದು ಅನೇಕರ ಬದುಕಿಗೆ ನೆರವಾದರು. ಮರಣವೇ ಮಹಾನವಮಿ ಎಂದು ತಮ್ಮ ಜೀವವನ್ನು ಲೆಕ್ಕಿಸದೆ ಆ ಗ್ರಾಮದ ಜನರ ಸೇವೆ, ಆರೈಕೆಯಲ್ಲಿ ತೊಡಗಿದರು. ಗುರುಗಳ ಸೇವೆ ಮಾಡುತ್ತಲೇ ಗಡ್ಡೆ ರೋಗಿಯನ್ನು ತೊಟ್ಟಿಲಲ್ಲಿ ಹೊತ್ತೊಯ್ದು ಅಡವಿಯ ಶುದ್ಧ ಪರಿಸರದಲ್ಲಿ ಬಿಟ್ಟು ಬಂದರು. ಶವ ಸಂಸ್ಕಾರ ಮಾಡುವಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ

ತೊಡಗಿಸಿಕೊಂಡರು. ಗುರುಗಳ ಜೊತೆಯಲ್ಲಿ ಬಂದ ಮಠದ ಮರಿಗಳಿಗೆ ಗಡ್ಡೆ ಬೇನೆ ಬಂದಾಗ ಅವರನ್ನು ಹೊತ್ತೊಯ್ದು ಅವರ ಮನೆಗೆ ತಲುಪಿಸಿ ಅವರ ಜೀವ ಕಾಪಾಡಿದರು. ಅವರ ಸಂಬಂಧಿಕರು ಹಾಗೂ ಪಾಲಕರು ಎಲ್ಲಿ ಇರುತ್ತಾರೋ ಅಲ್ಲಿಗೆ ಅವರನ್ನು ಕರೆದೊಯ್ದು ಸಂಬಂಧಗಳನ್ನು ಬೆಸೆದರು. ಚನ್ನಬಸವರ ನಿಸ್ವಾರ್ಥ ಸೇವೆಯನ್ನು ಕಣ್ಣಾರೆ ಕಂಡು ಶಿವಲಿಂಗೇಶ್ವರರು ಆತನ ಧೈರ್ಯ, ಸಾಹಸ, ಕರುಣೆ ಕಂಡು ಆತನ ಮೇಲೆ ಮಮತೆಯ ಮಳೆಗರೆದರು. ತಮ್ಮ ಜೀವ ಕಾಪಾಡಿದ ಚನ್ನಬಸವರನ್ನು ಆಗ ಅಲ್ಲಿನ ಅನೇಕರು, ಸಾಮಾನ್ಯ ಜನರ ಸೇವೆಗೈದ ಚನ್ನಬಸವರು ಇನ್ನೂ ನೂರ್ಕಾಲ ಬಾಳಿ ಬದುಕಲಿ, ಅವರಿಂದ ಈ ಧರೆ ಪಾವನವಾಗಲಿ ಎಂದು ಹೃದಯಾರೆ ಹಾರೈಸಿದರು.

4. ಶಿವಯೋಗ ಮಂದಿರಕ್ಕೆ ಪಯಣ:

ಸ್ವತಂತ್ರ ಪೂರ್ವದಲ್ಲಿ ಕರ್ನಾಟಕದ ಈ ಭಾಗ ನಿಜಾಮ ಸರ್ಕಾರದ ಆಡಳಿತಕ್ಕೆ ಒಳಪಟ್ಟಿತ್ತು. ಉರ್ದು ಆಡಳಿತ, ಶಿಕ್ಷಣದ ಭಾಷೆಯಾಗಿತ್ತು. ಮರಾಠಿ ವ್ಯವಹಾರದ ಭಾಷೆಯಾಗಿತ್ತು. ಆಗ ಕನ್ನಡ ಕಲಿಯುವುದೇ ಮಹಾ ಅಪರಾಧವಾಗಿತ್ತು. ಕನ್ನಡ ಭಾಷೆ ಎನ್ನುವುದು ಆಗ ಕೇವಲ ಮನೆಗಳಲ್ಲಿ ಮಾತ್ರ ಬಳಕೆಯಲ್ಲಿತ್ತು. ಕನ್ನಡವು ಅತ್ತ ಮರಾಠಿ ಮತ್ತು ಇತ್ತ ಉರ್ದು ಜನರ ಕೈಯಲ್ಲಿ ಸಿಲುಕಿ ಒಂದೇ ಸಮ ನರಳಾಡುವಂತಾಗಿತ್ತು. ಕನ್ನಡ ನೆಲದಲ್ಲಿ ಹುಟ್ಟಿದವರು ತಮ್ಮ ಮಾತೃಭಾಷೆ ಕನ್ನಡದಲ್ಲಿ ಕಲಿಯಲು ಅವಕಾಶವಿರಲಿಲ್ಲ.

ಆಗಿನ ಕಾಲದಲ್ಲಿ ಈ ಭಾಗದಲ್ಲಿ ಕನ್ನಡ ಪತ್ರಿಕೆಗಳೇ ಇರಲಿಲ್ಲ. ಆಗ ಮೈಸೂರನಿಂದ ಪ್ರಕಾಶಿತವಾಗುತ್ತಿದ್ದ "ಸ್ಟಾರ್ ಆಫ್ ಮೈಸೂರು" ಎಂಬ ಇಂಗ್ಲಿಷ್ ಹೆಸರಿನ ಕನ್ನಡ ಪತ್ರಿಕೆ ಹಳೆ ಮೈಸೂರು ಭಾಗದಲ್ಲಿ ಶೈಕ್ಷಣಿಕ ಧಾರ್ಮಿಕ ಹಾಗೂ ಸಾಮಾಜಿಕವಾಗಿ ಬಹು ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿತ್ತು. ಇದರ ಕೀರ್ತಿ ನಾಡಿನಾದ್ಯಂತ ಹಬ್ಬಿತ್ತು. ಕನ್ನಡದ ಪತ್ರಿಕೆ ಇದಾಗಿದ್ದರಿಂದ ಆಗಿನ ಅನೇಕ ಚರಜಂಗಮರ ಮೂಲಕ ಕದ್ದು ಮುಚ್ಚಿ ಈ ಭಾಗದವರೆಗೂ ಬಂದು ಅದು ತಲುಪುತ್ತಿತ್ತು. ಒಮ್ಮೆ ಈ ಪತ್ರಿಕೆಯೊಂದು

ಸಂಚಿಕೆ ಚನ್ನಬಸವರ ಕೈಗೆ ಸಿಕ್ಕಿತು. ಈ ಪತ್ರಿಕೆಯಲ್ಲಿ ಆಗ ಪ್ರಕಟಗೊಂಡಿದ್ದ ಶಿವಯೋಗ ಮಂದಿರದ ಸುವಿಖ್ಯಾತಿ ಓದಿ ಖುಷಿಗೊಂಡರು. ಶೈಕ್ಷಣಿಕವಾಗಿ ಇನ್ನೂ ಹೆಚ್ಚಿನ ಸಾಧನೆ ಮಾಡಲು ತಾವೂ ಅಲ್ಲಿಗೆ ಹೋಗಬೇಕು ಎಂದು ಹಂಬಲಿಸಿದರು.

ಆದರೆ "ತಾನೊಂದು ಬಗೆದರೆ ದೈವವೊಂದು ಬಗೆದಿತ್ತು" ಎನ್ನುವಂತೆ ಅದೇವೇಳೆಯಲ್ಲಿಯೇ ಭಾಲ್ಕಿಯ ಹಿರೇಮಠದ ಗುರುಗಳಾದ ಸಿದ್ಧಬಸವರಿಗೆ ಅಂಟಿಕೊಂಡಿದ್ದ ಆ ಇಸುಬು ರೋಗ ಅವರನ್ನು ಮತ್ತಷ್ಟು ಹಣ್ಣುಗಾಯಿ ನೀರುಗಾಯಿ ಮಾಡಿತ್ತು. ಅವರ ಅನಾರೋಗ್ಯ ಮತ್ತಷ್ಟು ಉಲ್ಬಣಗೊಂಡಿತು. ಇದನ್ನರಿತ ನಗರದ ಪ್ರಮುಖರು ಗುರುಗಳ ಜಾಗಕ್ಕೆ ಯೋಗ್ಯ ಮರಿಯನ್ನು ಹುಡಕಲು ಸಾಕಷ್ಟು ಹೆಣಗಾಡಬೇಕಾಯಿತು. ಪ್ರಮುಖರಾದ ರಾಯ ಕಾಶಿರಾಯ ದೇಶಮಯಖ ಮತ್ತು ಅವರ ಅನುಯಾಯಿ ಶಿವಲಿಂಗಪ್ಪ ಖಂಡ್ರೆಯವರು ಶಿವಯೋಗ ಮಂದಿರಕ್ಕೆ ತೆರಳಿ ಅಲ್ಲಿಂದ ತಮ್ಮೂರಿನ ಮಠಕ್ಕೆ ಯೋಗ್ಯ ಮರಿಯನ್ನು ತರಲು ಮುಂದಾದರು. ಅಲ್ಲಿನ ಪ್ರಶಾಂತ ಮತ್ತು ಪ್ರಸನ್ನ ವಾತಾವರಣ ಕಂಡು ದಂಗಾಗುತ್ತಾರೆ. ಮಂದಿರದೊಳಗೆ ಕಾಲಿಡುತ್ತಲೇ ಅಲ್ಲಿದ್ದ ಪ್ರತಿಯೊಬ್ಬರೂ ಹೂ ಕೀಳುವ, ಬಿಲ್ವದೆಲೆ ಬಿಡಿಸುವ, ಪವಿತ್ರ ಉದಕ ಸಿದ್ಧಪಡಿಸುವ, ಪೂಜೆ, ಜಪ, ತಪಗಳಲ್ಲಿ ಮುಳುಗಿರುವುದನ್ನು ಕಣ್ಣಾರೆ ಕಾಣುತ್ತಾರೆ. ಒಂದೆರಡು ಹೆಜ್ಜೆ ಮುಂದಿಡುತ್ತಲೇ ಅಲ್ಲಿಗೆ ಗುರು ಹಾನಗಲ್ಲ ಕುಮಾರ ಸ್ವಾಮಿಗಳು ಆಗಮಿಸುವ ಸುದ್ದಿ ಕಿವಿಗೆ ಬೀಳುತ್ತದೆ. ನೋಡುವಷ್ಟರಲ್ಲಿಯೇ ಶ್ರೀಗಳ ಆಗಮನವಾಗುತ್ತದೆ. ಅವರನ್ನು ಕಾಣುವುದೇ ತಡ ಅವರ ಕಾಲಿಗೆರಗಿ ತಮ್ಮ ಪರಿಚಯ ಹೇಳಿಕೊಂಡು ತಮ್ಮ ಮಠಕ್ಕೆ ಒಬ್ಬ ಯೋಗ್ಯ ಮರಿ ಸ್ವಾಮಿಗಳನ್ನು ಕೊಟ್ಟು ಕಳಿಸಿರಿ ಎಂದು ಗುರುಗಳ ಮುಂದೆ ತಮ್ಮ ಮನೋಇಚ್ಛೆಯನ್ನು ಪ್ರಕಟಿಸುತ್ತಾರೆ.

ಅಪ್ಪಾವ್ರೆ, ನಿಮ್ಮ ಈ ಮಂದಿರ ನೋಡಿ ನಮಗೆ ನಿಜಕ್ಕೂ ಬೆರಗಾಗಿದೆ. ಇಲ್ಲಿನ ಪರಿಶುಭ್ರ ವಾತಾವರಣ, ವಟುಗಳ ಮಂತ್ರಾಕ್ಷರದ ಕಲರವ, ಸ್ವಚ್ಛ ಕನ್ನಡದ ಜೊತೆಗೆ ಶಿವಭಕ್ತಿಯ ನಾದ, ನಿನಾದ ನಮ್ಮ ಮನಸೂರೆಗೊಂಡಿದೆ. ಆದರೆ ಭಾಲ್ಕಿಯಲ್ಲಿ ಇಂತಹ ವಾತಾವರಣವಿಲ್ಲ. ಉರ್ದು, ಪಾರ್ಶಿ ಮತ್ತು

ಮರಾಠಿ ಭಾಷೆಗಳು ನಮ್ಮ ಮೇಲೆ ಸವಾರಿ ಮಾಡುತ್ತಿವೆ. ಈಗ ಇರುವ ಮಠದ ಸ್ವಾಮಿಗಳೂ ತೀವ್ರ ಅನಾರೋಗ್ಯದಿಂದಾಗಿ ಸಂಪೂರ್ಣ ಮೆತ್ತಗಾಗಿದ್ದಾರೆ. ನಮ್ಮ ಮಠಕ್ಕೆ ಒಬ್ಬ ಸಮರ್ಥ ಉತ್ತರಾಧಿಕಾರಿ ಬೇಕಾಗಿದ್ದಾರೆ ಎಂದು ಗುರುಗಳಲ್ಲಿ ನಿವೇದಿಸಿಕೊಳ್ಳುತ್ತಾರೆ.

ಇವರಿಬ್ಬರ ಮನದ ದುಗುಡ ಅರ್ಥ ಮಾಡಿಕೊಂಡ ಗುರು ಕುಮಾರೇಶ್ವರರು, ನಮ್ಮ ಶಿವಯೋಗ ಮಂದಿರದಲ್ಲಿರುವುದು ಸಹ ಬಸವಕಲ್ಯಾಣದ ಬಸವನ ಬೆಳಕು, ಇಲ್ಲಿ ನೀವು ಕಂಡಿರುವ ಸಿರಿಯೂ ಅಲ್ಲಿಯದೆ. ಈ ಭಾಗದ ಮರಿಯನ್ನು ನೀವು ಅಲ್ಲಿಗೆ ಕರೆದೊಯ್ದರೆ, ನಿಮ್ಮ ಭಾಗದ ಬಗ್ಗೆ ನಿಮಗಿದ್ದಷ್ಟು ಕಾಳಜಿ ಇಲ್ಲಿನವರಿಗೆ ಇರುವುದಿಲ್ಲ. ಅಲ್ಲಿನ ನೆಲ, ಜಲ, ಭಾಷೆಯ ಬಗ್ಗೆ ನಿಮ್ಮಷ್ಟು ಇಲ್ಲಿನವರಿಗೆ ಗೊತ್ತಿರುವುದಿಲ್ಲ. ಹೀಗಾಗಿ ನಿಮ್ಮ ಭಾಗದ ಮರಿಯನ್ನೇ ಇಲ್ಲಿಗೆ ಕಳಿಸಿಕೊಟ್ಟರೆ ಅವರಿಗೆ ಉತ್ತಮ ತರಬೇತಿ ಕೊಟ್ಟು ಕಳಿಸುತ್ತೇವೆ ಎಂದು ಹೇಳಿ ಕಳಿಸಿದರು. ಭಾಲ್ಕಿಗೆ ಬಂದ ರಾಯ ಕಾಶೀರಾಯ ದೇಶಮುಖ ಮತ್ತು ಶಿವಲಿಂಗಪ್ಪ ಖಂಡ್ರೆಯವರು ಮಠದಲ್ಲಿ ಮರಿದೇವರಾಗಿದ್ದ ಷಣ್ಮುಖಯ್ಯ, ನೀಲಕಂಠಯ್ಯ ಎಂಬುವವರಿಗೆ ನೀವು ಶಿವಯೋಗ ಮಂದಿರಕ್ಕೆ ಹೋಗುವಿರಾ? ಎಂದು ಪ್ರಶ್ನಿಸಿದರು. ಆಗ ಅವರಿಬ್ಬರೂ ದೂರದ ಊರಿಗೆ ನಾವು ಹೋಗುವುದಿಲ್ಲ. ನಮ್ಮ ಮನೆಯಲ್ಲಿ ಯಾರೂ ಇಲ್ಲ ಎಂಬ ಇಲ್ಲದ ಸಬೂಬು ಹೇಳಿ ಜಾರಿಕೊಂಡರು. ಆಗ ಅವರಿಗೆ ಥಟ್ಟನೆ ಚನ್ನಬಸವ ಮರಿದೇವರ ನೆನಪಾಗಿ ಅವರನ್ನು ಕರೆಯ ಕಳಿಸಿದರು. "ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು ಅನ್ನ" ಎನ್ನುವಂತೆ ಕೂಡಲೇ ಭಾಲ್ಕಿಗೆ ಬಂದರು ಚನ್ನಬಸವರು. ಊರವರ ಹರಕೆ, ಹಾರೈಕೆಯಂತೆ ಶಿವಯೋಗ ಮಂದಿರದತ್ತ ಪಯಣ ಬೆಳೆಸಿದರು.

ದಾರಿಯಲ್ಲಿ ವಚನ ಗುಮ್ಮಟ ಫ.ಗು. ಹಳಕಟ್ಟಿಯವರನ್ನು ಕಂಡು ಮಾತಾಡಿಸಿ ಶಿವಯೋಗ ಮಂದಿರಕ್ಕೆ ಬಂದು ಗುರು ಕುಮಾರೇಶ್ವರರಲ್ಲಿ ತಾವು ಭಾಲ್ಕಿಯಿಂದ ಬಂದುದಾಗಿ ತಿಳಿಸಿದರು. ಚನ್ನಬಸವರಿಗೆ ಆಗ ೨೬ ವರ್ಷ. ಶಿವಯೋಗ ಮಂದಿರದಲ್ಲಿ ಆಗ ಎಂಟು ವರ್ಷದ ಮಕ್ಕಳಿಗೆ ಮಾತ್ರ ವಟು ಎಂದು ಸ್ವೀಕರಿಸಲಾಗುತ್ತಿತ್ತು. ಚನ್ನಬಸವ ವಯಸ್ಸು

ಹೆಚ್ಚಾಗಿರುವುದರಿಂದ ಗುರುಗಳು ಆತನಿಗೆ ಶಿವಯೋಗ ಮಂದಿರದ ಪ್ರವೇಶ ನಿರಾಕರಿಸುತ್ತಾರೆ. ಇದರಿಂದಾಗಿ ಚನ್ನಬಸವರ ಮನಸ್ಸಿಗೆ ನೋವಾಗುತ್ತದೆ. ಗುರುಗಳಿಗೆ ತಮ್ಮ ಮನೋ ಇಂಗಿತವನ್ನು ತಿಳಿಸುತ್ತಾರೆ. ಆಗ ಕುಮಾರೇಶ್ವರರು ಚನ್ನಬಸವರಿಗೆ ಹಲವಾರು ಪ್ರಶ್ನೆ ಕೇಳಿ ಪರೀಕ್ಷೆಗೆ ಒಡ್ಡುತ್ತಾರೆ. ಗುರುಗಳ ಎಲ್ಲ ಪ್ರಶ್ನೆಗಳಿಗೆ ಚನ್ನಬಸವರು ಸಮರ್ಪಕ ಉತ್ತರ ನೀಡಿದರು. ಅನ್ನ ಬೆಂದಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಅನ್ನದ ಅಗಳೊಂದನ್ನು ಹಿಸುಕಿ ಪರೀಕ್ಷಿಸುವಂತೆ ಚನ್ನಬಸವರಲ್ಲಿದ್ದ ಕುತೂಹಲ, ಆಸೆ, ಆಕಾಂಕ್ಷೆಯನ್ನು ಮನಗಂಡರು. ಚನ್ನಬಸವರಲ್ಲಿದ್ದ ಓದುವ, ಕಲಿಯುವ ಅದಮ್ಯ ಉತ್ಸಾಹ ಕಂಡು ಕುಮಾರೇಶ್ವರರು, ಚನ್ನಬಸವರನ್ನು ತಮ್ಮಲ್ಲೇ ಇಟ್ಟುಕೊಂಡು ತರಬೇತಿ ನೀಡಲು ಆರಂಭಿಸಿದರು.

ಸತ್ಯ, ಶುದ್ಧ, ಕಾಯಕದ ಮಹತ್ವ ತಿಳಿಸಿದರು. ಸರ್ವಜ್ಞ, ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭುಗಳ ವಚನಾದಿಗಳನ್ನು ಚನ್ನಬಸವರಿಗೆ ಕಲಿಸಿದರು. ಓದು, ಒಲವು, ಮಾಟ, ನೋಟ, ದಯೆ, ಧ್ಯಾನ, ಅಂತರಂಗಶುದ್ಧೀಕರಣದ ಬಗೆಯನ್ನು ಗುರು ಕುಮಾರೇಶ್ವರರು ಚನ್ನಬಸವರಿಗೆ ಕಲಿಸಿಕೊಟ್ಟರು. ಶರಣ ಮಾರ್ಗದ ಅರಿವು, ಆಚಾರ ಪಡೆದುಕೊಂಡ ಚನ್ನಬಸವರು ಗುರು ಕುಮಾರೇಶ್ವರಂತೆ ನಡೆ–ನುಡಿ ಒಂದಾಗಿಸಿಕೊಂಡು ಗುರುಗಳ ಸೇವೆ ಮಾಡುತ್ತ, ಶೀಲ, ಮಡಿ ಕಲಿತುಕೊಂಡು ಅದನ್ನು ತಮ್ಮ ಜೀವನದಲ್ಲಿ ಪಾಲಿಸಲು ಆರಂಭಿಸಿದರು. ಚನ್ನಬಸವರಿಗೆ ಶಿವಯೋಗ ಮಂದಿರದಲ್ಲಿ ಉಳಿದ ವಟುಗಳಿಗೆ ಸಿಗುವಂತೆ ನಿಯಮಿತ ಶಿಕ್ಷಣ ದೊರೆಯದಿದ್ದರೂ ಗುರು ಕುಮಾರೇಶ್ವರರು ಚನ್ನಬಸವರ ಶಾಸ್ತ್ರೋಕ್ತ ಓದಿಗಾಗಿ ಶಾಸ್ತ್ರಿಯೊಬ್ಬರನ್ನು ನೇಮಿಸಿದ್ದರು. ಲಿಂಗಾಯತ ಪುಣ್ಯಪುರುಷರ ಕೃತಿಗಳನ್ನು ಅರೆದು ಕುಡಿದರಲ್ಲದೆ ಲಿಂಗಾಯತ ಧರ್ಮದ ಷಟಸ್ಥಲ, ಅಷ್ಟಾವರಣ, ಪಂಚಾಚಾರಗಳ ಬಗ್ಗೆ ಗಂಭೀರ ಅಧ್ಯಯನ ಮಾಡಿದರು.

ಕಪಟರಾಳ ಕೃಷ್ಣರಾಯರು ಬಸವಾದಿ ಶರಣರು ಹಾಗೂ ಅವರು ಸ್ಥಾಪಿಸಿದ್ದ ಅನುಭವ ಮಂಟಪದ ಬಗ್ಗೆ ಆಗ ಎಬ್ಬಿಸಿದ್ದ ಕುಹಕದ ಬಗ್ಗೆಯೂ ಇವರು ಅರಿತುಕೊಂಡಿದ್ದರು. ಒಮ್ಮೆ ಇಲ್ಲಿಗೆ ಬಂದಿದ್ದ ಉತ್ತಂಗಿ ಚೆನ್ನಪ್ಪನವರ

ಜೊತೆ ಈ ಕುರಿತು ಸುದೀರ್ಘ ಚರ್ಚೆ ನಡೆಸಿದರು. ಶರಣರ ಅಗಾಧ ಚಿಂತನೆ, ಅವರ ದೂರದೃಷ್ಟಿ, ಮುಂದಾಲೋಚನೆ ಇವೆಲ್ಲವೂಗಳ ಬಗ್ಗೆ ಕೂಲಂಕಷವಾಗಿ ಅವರೊಂದಿಗೆ ಚಿಂತನ, ಮಂಥನ ನಡೆಸಿದರು. ಶಿವಯೋಗ ಮಂದಿರದಲ್ಲಿ ಇರುವಾಗಲೇ ಧ್ಯಾನ, ಪ್ರಾರ್ಥನೆ, ಸೇವೆ, ಸ್ಮರಣೆಯನ್ನು ಕಲಿತುಕೊಂಡ ಚನ್ನಬಸವರು ಅಪ್ಪಟ ಅಪರಂಜಿಯಾಗಿ ರೂಪುಗೊಂಡರು.

ಈ ಹಿಂದೆ ಫ.ಗು ಹಳಕಟ್ಟಿಯವರನ್ನು ಭೇಟಿಯಾದಾಗ ಅವರು ನೀಡಿದ್ದ ವಚನಧರ್ಮಸಾರ ಕೃತಿಯ ಓದು ಚನ್ನಬಸವರಿಗೆ ತಮ್ಮ ಉಸಿರುವರೆಗೆ ಬಸವತತ್ವ ತತ್ವಾಚರಣೆಗೆ ಪ್ರೇರಣೆ ನೀಡುವಂತಾಯಿತು. ಹೀಗೆ ಗುರುಸೇವೆ, ಶಾಸ್ತ್ರಾಧ್ಯಯನದಲ್ಲಿಯೇ ಶಿವಯೋಗ ಮಂದಿರದಲ್ಲಿ ಅವರು ಆರು ವರ್ಷ ಕಳೆದರು.

ಹೀಗಿರುವಾಗಲೇ ಭಾಲ್ಕಿಯ ಸಿದ್ಧಬಸವ ಗುರುಗಳು ಲಿಂಗೈಕ್ಯರಾದರೆಂದು ಕಮಲಾನಗರದ ಶಂಕ್ರಯ್ಯ ಸ್ವಾಮಿಗಳೂ ಲಿಂಗದೊಳಗಾಗಲು ಅಣಿಯಾಗುತ್ತಿದ್ದಾರೆ ಎಂಬ ಅಘಾತಕಾರಿ ಸುದ್ದಿ ಚನ್ನಬಸವರ ಕಿವಿಗೆ ಬಿದ್ದಿತು. ಪಟ್ಟಾಧಿಕಾರಕ್ಕಾಗಿ ಕೂಡಲೇ ಭಾಲ್ಕಿಗೆ ಬರಬೇಕು ಎಂಬ ಕರೆ ಸಹ ಬಂದಿತು. ಆಗ ಚನ್ನಬಸವರು ನನ್ನ ಓದು ವಿದ್ಯಾಭ್ಯಾಸ ಇನ್ನೂ ಮುಗಿದಿಲ್ಲ. ನಾನಿನ್ನೂ ಕಲಿಯಬೇಕಿದೆ. ಶಿವಯೋಗ ಸಾಧನೆ ಮಾಡಬೇಕಿದೆ, ಈಗಲೇ ನಾನು ಒಲ್ಲೆ ಎಂದು ಗುರು ಕುಮಾರೇಶ್ವರರಲ್ಲಿ ಪರಿಪರಿಯಾಗಿ ಮನವಿ ಮಾಡಿಕೊಂಡರು. ಆಗ ಕುಮಾರೇಶ್ವರರು ಚನ್ನಬಸವರಿಗೆ ತಿಳಿ ಹೇಳಿ ಅಲ್ಲಿಗೆ ಹೋಗು ನಿನಗೆ ಒಳ್ಳೆಯದಾಗುವುದರ ಜತೆಗೆ ಅಲ್ಲಿನ ಜನರಿಗೂ ಒಳ್ಳೆಯದಾಗುತ್ತದೆ ಎಂದು ಹೇಳಿ ಕಳಿಸುತ್ತಾರೆ. ಮೇಲಾಗಿ "ನೀನು ಮಠದ ಗುಲಾಮನಾಗಬೇಡ, ಸಮಾಜದ ಸೇವಕನಾಗು. ನಿಮ್ಮ ಗಡಿ ಭಾಗದಲ್ಲಿ ಕನ್ನಡ ಪ್ರಸಾರ ಮಾಡು" ಎಂದು ಹೇಳಿ ಕಳಿಸಿದರು. ಒಲ್ಲದ ಮನಸ್ಸಿನಿಂದಲೇ ಚನ್ನಬಸವರು ಭಾಲ್ಕಿಗೆ ಬರುತ್ತಾರೆ.

5. ಪಟ್ಟಾಧಿಕಾರ:

ಶಿವಯೋಗ ಮಂದಿರದಿಂದ ಮರಳಿದ ಚನ್ನಬಸವರನ್ನು ಇಡೀ ಭಾಲ್ಕಿ ನಗರದ ಜನತೆ ಅತ್ಯಂತ ಸಡಗರ, ಸಂಭ್ರಮದಿಂದ ಬರಮಾಡಿಕೊಳ್ಳುತ್ತದೆ. ತಮ್ಮೂರಿಗೆ ಪುಣ್ಯದ ಆಗಮನವೆಂದೇ ಅವರು ಬಗೆದು ಹರ್ಷಿಸುತ್ತಾರೆ. ಆದರೆ ಭಾಲ್ಕಿಯ ಹಿರೇಮಠ ಮಾತ್ರದಲ್ಲಿ ಮಾತ್ರ ಅರಾಜಕತೆ, ಅನಾಚಾರ ತುಂಬಿರುತ್ತದೆ. ಅದು ಒಡೆಯನಿಲ್ಲದ ಹಾಳು ಮಠವಾಗಿ ಪರಿಣಮಿಸಿರುತ್ತದೆ.

ಮನೆಯೊಳಗೆ ಮನೆಯೊಡೆನಿದ್ದಾನೋ ಇಲ್ಲವೋ
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ
ಕೂಡಲಸಂಗಮದೇವ

ಎನ್ನುವ ಬಸವಣ್ಣನವರ ವಚನದಂತೆ ಆ ಮಠದಲ್ಲಿ ನಡೆಯಬಾರದ ಅನಾಚಾರಗಳು ನಡೆಯುತ್ತಿರುತ್ತವೆ. ಅಲ್ಲಿನ ಮರಿದೇವರುಗಳು ಅದನ್ನೊಂದು ಸಂಸಾರಸ್ಥರ ಮಠವೆಂಬಂತೆ ಪರಿವರ್ತಿಸಿದ್ದರು. ಮಠದ ತುಂಬೆಲ್ಲ ಶೃಂಗಾರಲೀಲೆಗಳು, ಕಾಮಲೀಲೆಗಳು ಹಾಸುಹೊಕ್ಕಾಗಿದ್ದವು. ಕೂಸು-ಕುನ್ನಿಗಳೇ ಮಠದಲ್ಲಿ ಓಡಾಡಿಕೊಂಡಿದ್ದರು. ಇದನ್ನು ಕಣ್ಣಾರೆ ಕಂಡ ಚನ್ನಬಸವರಿಗೆ ಹದಗೆಟ್ಟು ಹಳ್ಳ ಹಿಡಿದಿರುವ ಈ ಮಠ ಹಾಗೂ ಮಠದ ವಾತಾವರಣವನ್ನು ಹೇಗೆ ಸುಧಾರಣೆ ಮಾಡಬೇಕು ಎಂಬ ಚಿಂತೆಯಲ್ಲಿ ಮುಳುಗಿದರು. ಆಗ ಊರ ಪ್ರಮುಖರೆಲ್ಲರೂ ಬಂದು ಗುರು ಸಿದ್ಧಬಸವರ ಉತ್ತರಾಧಿಕಾರಿಯಾಗುವಂತೆ ವಿನಂತಿಸಿದರು. ಜನರ ಒತ್ತಾಸೆಯ ಮೇರೆಗೆ ಬಸವೇಚ್ಛೆಯಂತೆ ಆಗಲಿ, ಎಲ್ಲದಕ್ಕೂ ಅವನಿದ್ದಾನೆ ಎಂದು ಪಟ್ಟಾಧಿಕಾರಕ್ಕೆ ತಮ್ಮ ಸಮ್ಮತಿ ಸೂಚಿದರು.

ಆಗ ಇಡೀ ಊರಿಗೆ ಊರೇ ಮದುವಣಗಿತ್ತಿಯಂತೆ ಶೃಂಗಾರಗೊಂಡಿತ್ತು. ನಗರದ ಎಲ್ಲ ಕಡೆ ಸುಣ್ಣ, ಬಣ್ಣ ಬಳಿಯಲಾಗಿತ್ತು. ಮನೆಯ ಬಾಗಿಲು ಜಂತಿಗಳಿಗೆ ಎಣ್ಣೆ ಹಚ್ಚಲಾಗಿತ್ತು. ಸಣ್ಣಾಟ, ದೊಡ್ಡಾಟ,

ನಾಟಕ ಗೀಗಿಪದ, ತಾಳ, ಮೇಳ, ವಾದ್ಯಗಳು ಊರ ತುಂಬ ಮೊಳಗಿದವು. ಜನಜಾತ್ರೆಯಲ್ಲಿ ಪಾಲ್ಗೊಳ್ಳುವಂತೆ ಪಟ್ಟಾಧಿಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನಾಡಿನ ಮೂಲೆ ಮೂಲೆಗಳಿಂದ ಹರಗುರು ಚರಮೂರ್ತಿಗಳು ಬಾಲ್ಕಿಗೆ ಬಂದು ಬೀಡು ಬಿಟ್ಟಿದ್ದರು. ಪಟ್ಟಾಧಿಕಾರದ ಅಂಗವಾಗಿ ಒಂದು ತಿಂಗಳ ಪರ್ಯಂತ ಶರಣಚರಿತಾಮೃತಪಠಣ, ಪ್ರವಚನ, ವಚನಪಠಣ, ವಚನಗಾಯನ ಮುಂತಾದ ಕಾರ್ಯಕ್ರಮಗಳು ಜರುಗಿದವು. ಕರ್ನಾಟಕ, ತೆಲಂಗಾಣ, ಮರಾಠವಾಡದಿಂದ ಆಗಮಿಸಿದ್ದ ಭಕ್ತಾದಿಗಳು ತಮ್ಮ ತನು, ಮನ, ಧನದ ಸೇವೆ ಸಲ್ಲಿಸಿ ಕೃತಾರ್ಥರಾದರು. ಕಲ್ಯಾಣವೆಂಬ ಪ್ರಣತೆಯಲ್ಲಿ ಜ್ಯೋತಿ ಬೆಳಗಿದಂತೆ ಇಡೀ ನಗರವೇ ಸಂತಸ, ಸಂಭ್ರಮದಲ್ಲಿ ತೇಲಾಡಿತು.

ಹರಗುರು ಚರಮೂರ್ತಿಗಳ ಸಮ್ಮುಖ, ಪಟ್ಟಣದ ಪ್ರಮುಖರ ನೇತೃತ್ವದಲ್ಲಿ ಚನ್ನಬಸವರ ಪಟ್ಟಾಧಿಕಾರ ಕಾರ್ಯಕ್ರಮ (೧೯೨೪) ವಚನ, ಮಂತ್ರ ಘೋಷಗಳೊಂದಿಗೆ ಸಾಂಗವಾಗಿ ನೆರವೇರಿತು. ಕೆಳದಿಯ ಪಟ್ಟಾಧೀಶರಾದ ರೇವಣಸಿದ್ಧೇಶ್ವರರು, ಶಿವಯೋಗ ಮಂದಿರದ ಗುರು ಕುಮಾರೇಶ್ವರರು, ಕಲ್ಯಾಣ ಕಟ್ಟಿಮನಿ ಹುಲಿಶಾಂತಿ ಮಠದ ರೇವಣಸಿದ್ದೇಶ್ವರರು, ಮಹಾಗಾಂವಿ ಕಳ್ಳಿಮಠದ ವಿರೂಪಾಕ್ಷೇಶ್ವರರು, ಕಟಕಚಿಂಚೋಳಿಯ ಹಿರಿಮಠದ ಧೂಳಯ್ಯನವರು, ಅಣದೂರಿನ ಮರುಳಸಿದ್ದಪ್ಪ ಮುತ್ಯಾ ಅವರು, ರಾಯಚೂರಿನ ಮಹಾಂತ ಸ್ವಾಮಿಗಳು, ಗಡವಂತಿಯ ಗುರುದೇವರು, ಹಲಬುರಗಿಯ ಗುರುರಾಯರು, ಪ್ರಭುಮಹಾಸ್ವಾಮಿಗಳು, ಮುನ್ನಳ್ಳಿಯ ದೇಶಿಕರು ಸೇರಿದಂತೆ ನಾಡಿನ ಮೂಲೆಮೂಲೆಯಲ್ಲಿರುವ ಹರಗುರು ಚರಮೂರ್ತಿಗಳು ಸೇರಿದಂತೆ ಒಟ್ಟು ೪೩ ಜನ ಶ್ರೀಗಳು ಭಾಗವಹಿಸಿದ್ದರು. ಪಟ್ಟಾಧಿಕಾರ ಕಾರ್ಯಕ್ರಮದ ನಂತರ ನಗರದ ಪ್ರಮುಖ ಬೀದಿಗಳಲ್ಲಿ ಪೂಜ್ಯರ ಮೆರವಣಿಗೆಗಾಗಿ ಆನೆ ಅಂಬಾರಿ ಸಿದ್ಧಗೊಳಿಸಲಾಗಿತ್ತು. ಮೆರವಣಿಗೆ ತೆಗೆಯಲು ನಿಜಾಮ ಸರ್ಕಾರದಿಂದ ಅನುಮತಿಯನ್ನು ಸಹ ಪಡೆಯಲಾಗಿತ್ತು. ಆದರೆ ಪೂಜ್ಯರು ತಾವು ಆನೆ, ಅಂಬಾರಿಯ ಮೇಲೆ ಮೆರೆಯುವುದಕ್ಕಿಂತ ವಚನ ಸಾಹಿತ್ಯದ ಮೆರವಣಿಗೆ ಮಾಡಿರಿ ಎಂದು ಹೇಳಿದರು. ಭಕ್ತರು ಎಷ್ಟು ಒತ್ತಾಯ

ಮಾಡಿದರೂ ಆನೆ ಅಂಬಾರಿಯನ್ನು ಅವರು ಹತ್ತಲಿಲ್ಲ. ಆದರೂ ಯಾವುದೇ ಅರಸರಿಗೇನು ಕಮ್ಮಿ ಇಲ್ಲ ಎನ್ನುವಂತೆ ಮೆರವಣಿಗೆ ನಡೆದು ಹೋಯಿತು. ಆನೆ ಅಂಬಾರಿ ಮೇಲಿನ ವಚನ ಗ್ರಂಥಗಳ ಮೆರವಣಿಗೆ ಮಠದ ಹೆಬ್ಬಾಲಿಗೆ ಬರುತ್ತಿದ್ದಂತೆ ಮಠದೊಳಗೆ ಮನೆ ಮಾಡಿದ್ದ ಕಾವಿ ವೇಷದ ಬೆಕ್ಕುಗಳು ತನ್ನಿಂದ ತಾನೆ ಪುಟ ನೆಗೆದು ಮಠದಿಂದ ಮಾಯವಾದವು. ಚನ್ನಬಸವ ಪಟ್ಟದ್ದೇವರ ಜೀವನದಲ್ಲಿ ಇದೊಂದು ಮಹತ್ವದ ಮೈಲುಗಲ್ಲಾಗಿ ಪರಿಣಮಿಸಿತು.

ಇದಾದ ನಂತರ ಮಠದಲ್ಲಿ ದೆವ್ವ ವಾಸವಾಗಿದೆ. ಅದಕ್ಕೆ ದಿನಾಲು ಸಾಕಷ್ಟು ಊಟ ಬೇಕು, ಹಾಲು, ಮೊಸರು ಬೇಕು. ಅದು ಮಠವನ್ನು ಕಾಯುತ್ತದೆ. ಮಠ ಹೋಗಿ ದೆವ್ವಗಳ ವಾಸಸ್ಥಾನ ಎಂಬ ಸುಳ್ಳು ಸುದ್ದಿ ಹಬ್ಬಿಸಿದ್ದರು. ಇದೆಲ್ಲ ಸುಳ್ಳು ವದಂತಿಯನ್ನು ಮಠದೊಳಗೆ ವಾಸವಿದ್ದ ಕಳ್ಳಬೆಕ್ಕುಗಳು ಸೃಷ್ಟಿ ಮಾಡಿದ್ದ ಕಥೆಯಾಗಿತ್ತು. ಆದರೆ ಪೂಜ್ಯರು ಮಠದೊಳಗೆ ಕಾಲಿಟ್ಟ ನಂತರ ಆ ದೆವ್ವ ಸಹ ತನ್ನ ಕಾಲಿಗೆ ಬುದ್ಧಿ ಹೇಳಿತು. ಆದರೆ ಮಠದಲ್ಲಿ ತೊಟ್ಟಿಲು ಕಟ್ಟಿದ್ದ ನೀಲಕಂಠ ಸ್ವಾಮಿ ಮಾತ್ರ ತನ್ನ ಸರ್ವಾಧಿಕಾರಿ ಮನೋಭಾವ ಬಿಟ್ಟಿರಲಿಲ್ಲ. ನಾನು ಮಠ ಬಿಟ್ಟು ಹೋಗುವುದಿಲ್ಲ ಎಂಬ ಉದ್ಧಟತನ ಬೇರೆ ತೋರುತ್ತಿದ್ದ. ಇದನ್ನು ಕಂಡ ಚನ್ನಬಸವ ಪಟ್ಟದ್ದೇವರಿಗೆ ಮಠದ ಪೀಠಾಧಿಕಾರವು ನುಂಗಲೂ ಬಾರದ ಉಗಳಲೂ ಬಾರದ ರೀತಿ ಎನಿಸಿತು. ಒಂದರ್ಥದಲ್ಲಿ ಮಠದ ಈ ಪೀಠಾಧ್ಯಕ್ಷ ಸ್ಥಾನ ಹೂವಿನ ಹಾಸಿಗೆ ಬದಲು ಮುಳ್ಳಿನ ಹಾಸಿಗೆ ಅನಿಸಿತು. ಭಾಲ್ಕಿ ಹಿರೇಮಠದ ಯಾವ ಶಾಖಾ ಮಠಗಳೂ ಧರ್ಮದ ಮಾರ್ಗದಲ್ಲಿ ನಡೆಯುತ್ತಿರಲಿಲ್ಲ. ಭ್ರಷ್ಟ ಸ್ವಾಮಿಗಳಿಂದ ಕೂಡಿದ್ದ ಆ ಮಠಗಳೂ ಸಹ ಭ್ರಷ್ಟಗೊಂಡಿದ್ದವು. ಇಂತಹ ವಿಷಮ ಪರಿಸ್ಥಿತಿಯಲ್ಲೇ ಅವರು ೧೨ ವರ್ಷ ವನವಾಸ ಅನುಭವಿಸಿದರು. ಕೊನೆಗೆ ಬೇಸತ್ತು ಮತ್ತೆ ಶಿವಯೋಗ ಮಂದಿರದ ಕಡೆ ಪಯಣ ಬೆಳೆಸುತ್ತಾರೆ. ಅಲ್ಲಿ ವರ್ಷಾರುತಿಂಗಳು ಇರುತ್ತಾರೆ. ಆಗ ಚನ್ನಬಸವರಿಗೆ ಗುರುಕುಮಾರೇಶ್ವರರೆ ಧೈರ್ಯ ತುಂಬಿ ಮತ್ತೆ ಭಾಲ್ಕಿ ಮಠಕ್ಕೆ ಕಳಿಸುತ್ತಾರೆ. ಚನ್ನಬಸವ ಪಟ್ಟದ್ದೇವರ ಇಲ್ಲಿಯವರೆಗಿನ ಜೀವನ ಬರೀ ಸಿದ್ಧತೆಯ ಜೀವನವಾಗಿದ್ದರೆ ಇನ್ನು ಮುಂದಿನ ಅವರ ಜೀವನ ಸಾಧನೆಯ ಪರ್ವವಾಗಿತ್ತು.

6. ಸಮಾಜೋದ್ಧಾರ್ಮಿಕ ಯಾತ್ರೆ:

ಜೋಳವಾಳಿ ಆಳು ನಾನಲ್ಲ, ವೇಳೆಯಾಳು ನಾನು. ಮಠದ ಆಳಾಗದೆ ಬಸವಣ್ಣನವರ ಆಳು ಎಂದು ಬಗೆದು ಮತ್ತೆ ಮಠಕ್ಕೆ ಬಂದು ಬಡವರ, ದೀನ, ದಲಿತರ ಸೇವೆಯಲ್ಲಿ ತೊಡಗಿದ ಚನ್ನಬಸವಪಟ್ಟದ್ದೇವರಿಗೆ ನೀಲಕಂಠಯ್ಯ ಎಂಬ ಮರಿದೇವರು ಬಹು ದೊಡ್ಡ ತಲೆ ನೋವಾಗಿ ಪರಿಣಮಿಸಿದರು. ಮಠದಲ್ಲಿಯೇ ಸಂಸಾರ ಹೂಡಿದ್ದ ಅವರು ಎಷ್ಟು ಮನವಿ ಮಾಡಿದರೂ ಮಠ ಬಿಟ್ಟು ಹೋಗಲು ಒಪ್ಪಲಿಲ್ಲ. ಇದರಿಂದ ನಿರಾಸೆಗೊಂಡ ಪೂಜ್ಯರು ಮಠ ಬೇಡ, ಮಂದಿರ ಬೇಡ ಎಂದು ನಿರ್ಧರಿಸಿ ರಾಯ ಕಾಶೀರಾಯ ದೇಶಮುಖರ ತೋಟದಲ್ಲಿರುವ ಬುಡಯ್ಯನ ಮಠದಲ್ಲಿ ಅನುಷ್ಠಾನಕ್ಕೆ ಕುಳಿತರು. ಕಾಗೆ ಕೂಡುವುದಕ್ಕೂ ಟೊಂಗೆ ಮುರಿಯುವುದಕ್ಕೂ ಎಂಬಂತೆ ಕೊನೆಗೆ ನೀಲಕಂಠ ಸ್ವಾಮಿ ಮಠ ಬಿಟ್ಟು ತೊಲಗಿದ. ಊರ ಪ್ರಮುಖರಾದ ರಾಯ ಕಾಶೀರಾಯ ದೇಶಮುಖ, ಶಿವಲಿಂಗಪ್ಪ ಖಂಡ್ರೆ, ಸಿದ್ಧಲಿಂಗಪ್ಪ ಕಾಕನಾಳೆ ಮುಂತಾದವರಿಗೂ ನೀಲಕಂಠ ಸ್ವಾಮಿ ಮಠ ಬಿಟ್ಟು ತೊಲಗಿರುವುದು ಸಂತೋಷವನ್ನುಂಟು ಮಾಡಿತು. ಅವರೆಲ್ಲರೂ ಊರಿಗೆ ಊಟ ಹಾಕಿಸಿ ಪೂಜ್ಯರನ್ನು ಮತ್ತೆ ಮಠಕ್ಕೆ ಕರೆ ತಂದರು. ಆಗ ಚನ್ನಬಸವ ಪಟ್ಟದ್ದೇವರು ಮಠದೊಳಗೆ ಕಾಲಿಟ್ಟರು. ಅಲ್ಲಿಂದಲೇ ಶುರುವಾಯ್ತು ಅವರ ಸಮಾಜೋಧಾರ್ಮಿಕ ಯಾತ್ರೆ.

ಬಸವ ಮಾರ್ಗದಲ್ಲಿ ನಡೆದು ನುಡಿಯುತ್ತಿದ್ದ ಚನ್ನಬಸವ ಪಟ್ಟದ್ದೇವರು, ಮಠ ಹಾಗೂ ಮಠಕ್ಕೆ ಅಂಟಿಕೊಂಡಿದ್ದ ಕೊಳೆ ತೊಳೆಯಲು ಮುಂದಾದರು. ಆ ದಿಸೆಯಲ್ಲಿ ಕ್ರಿಯಾಶೀಲರಾದರು. ಮಠದಲ್ಲಿನ ಮಾಯೆಯನ್ನು ಹೊಡೆದೋಡಿಸಿದರು. ಅದರ ಶಾಖಾ ಮಠಗಳಿಗೆ ಅಂಟಿದ ಕೊಳೆಯನ್ನು ಸಹ ತೊಳೆದರು. ಮಠ ಮತ್ತು ಮಠಾಧೀರನ್ನು ತಿದ್ದಲು ಅಣಿಯಾದರು.

ಬೇಲಿಯೇ ಎದ್ದು ಹೊಲ ಮೇಯ್ದಂತೆ ಮಠಾಧೀಶರು ಹಾಗೂ ಊರವರು ಸೇರಿ ಮಠದ ಆಸ್ತಿ, ಪಾಸ್ತಿ ಮಾರಾಟ ಮಾಡಿ ಮಠಗಳನ್ನು ಹಾಳುಗೆಡವಿದ್ದರು. ಇದೆಲ್ಲವನ್ನು ಅವರು ತೊಳೆದು ಹಾಕಿದರು. ಆದರೆ ಆಗ ಅಲ್ಲಿರುವ ಪಟ್ಟಭದ್ರಶಕ್ತಿಗಳೆಲ್ಲವೂ ಒಂದಾಗಿ ಚನ್ನಬಸವ ಪಟ್ಟದ್ದೇವರ

ಮೇಲೆ ಮುಗಿಬಿದ್ದವು. ಆದರೂ ಅಂಜದೆ, ಅಳುಕದೆ ಆ ದುಷ್ಟ ಶಕ್ತಿಯನ್ನು ಅವರು ತಮ್ಮಲ್ಲಿನ ಕತೃತ್ವ ಶಕ್ತಿಯಿಂದ ಹಿಮ್ಮೆಟ್ಟಿಸಿದರು. ಹಳ್ಳಿ ಹಳ್ಳಿ ಜೋಳಿಗೆ ಹಿಡಿದು ತಿರುಗಾಡಿ ಜನರ ದುಶ್ಚಟ, ದುರ್ಗುಣಗಳನ್ನು ಮುಕ್ತಗೊಳಿಸಿದರು. ಅರಿವೇ ಗುರು ಎಂದು ಸಾರಿ ಭಕ್ತರನ್ನು ಉದ್ಧಾರ ಮಾಡುವ ಕಾಯಕದಲ್ಲಿ ತೊಡಗಿದರು. ಮೈನಳ್ಳಿ, ಮೋರಗಿ, ಕಾರಮುಂಗಿ ಮುಂತಾದ ಕಡೆಗಳಲ್ಲಿ ಅನುಷ್ಠಾನಗಳ ಮೇಲೆ ಅನುಷ್ಠಾನ ಕೈಗೊಂಡರು. ಮರಾಠವಾಡದ ನಾಂದೇಡ ಜಿಲ್ಲೆಯಲ್ಲಿರುವ ಶಿರಢೋಣ ಶಾಖಾ ಮಠಕ್ಕೆ ಬಂದು ಲಿಂಗಾಯತ ಧರ್ಮದ ಕ್ರಾಂತಿ ಮೊಳಗಿಸಿದರು. ಆಗ ಅನ್ಯಧರ್ಮಕ್ಕೆ ಸೇರಿದ್ದ ಲಿಂಗಾಯತರು ಪೂಜ್ಯರ ಜೊತೆ ಕೈಜೋಡಿಸಿ ಅವರು ಹಿಡಿದಿದ್ದ ಬಸವ ಧ್ವಜಕ್ಕೆ ಸಾಥ್ ನೀಡಿದರು. ಮಾಂಜರವೆಂಬ ಹಳ್ಳಿಯಲ್ಲೂ ಧರ್ಮಶುದ್ಧಿಯ ಕಾರ್ಯ ಕೈಗೊಂಡರು.

ಆರ್ಯ ಸಮಾಜ ಮೇಲುಗೈ ಸಾಧಿಸಿದ್ದ ಆ ದಿನಗಳಲ್ಲಿ ಉದಗೀರ ಪ್ರದೇಶಕ್ಕೆ ಹರ್ಡೇಕರ್ ಮಂಜಪ್ಪ, ಗುರುಮಠಕಲ್‌ನ ಶಾಂತವೀರ ಸ್ವಾಮಿಗಳನ್ನು ಕರೆಸಿಕೊಂಡು ಲಿಂಗಾಯತ ಧರ್ಮದ ಕಹಳೆ ಮೊಳಗುವಂತೆ ಮಾಡಿದರು. ದೀಪದ ಬುಡದಲ್ಲೇ ಕತ್ತಲು ಎನ್ನುವಂತೆ ಭಾಲ್ಕಿಯಲ್ಲಿಯೇ ಒಳಪಂಗಡ, ಉಪಪಂಗಡಗಳಿದ್ದವು. ಇದನ್ನು ನಿವಾರಿಸಲು ಯತ್ನಿಸಿದ ಶ್ರೀಗಳಿಗೆ ಆಗ ಜನರು ಬಹಳ ಕಷ್ಟ ಕೊಟ್ಟರು. ಕೊಲೆ ಬೆದರಿಕೆಯನ್ನೂ ಹಾಕಿದರು. ಆದರೂ ಛಲ ಬಿಡದ ತ್ರಿವಿಕ್ರಮನಂತೆ ಪೂಜ್ಯರು ಮುಂದೆ ಇಟ್ಟ ಹೆಜ್ಜೆಯನ್ನು ಹಿಂದೆ ಇಡಲಿಲ್ಲ. ಹೀಗಾಗಿ ಬಂದ ಸಂಕಷ್ಟಗಳೆಲ್ಲವೂ ತಾನೇ ಮಂಜಿನಂತೆ ಒಂದೊಂದಾಗಿ ಕರಗಿ ಹೋದವು.

ಜನರಲ್ಲಿರುವ ಅಜ್ಞಾನ, ಅಂಧಕಾರ ನಿವಾರಣೆಯಾಗಬೇಕಾದರೆ ಜನರನ್ನು ಮೊದಲು ಸುಶಿಕ್ಷಿತರನ್ನಾಗಿ ಮಾಡಬೇಕು ಎಂದು ಸಂಕಲ್ಪ ಮಾಡಿಕೊಂಡ ಪೂಜ್ಯರು ಮೋರಗಿಯಿಂದಲೇ ಶಾಂತಿವರ್ಧಕ ಹೆಸರಿನ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿದರು. ಇದಾದ ಬಳಿಕ ಅವರು ಬಸವ ಕ್ರಾಂತಿಯ ಧ್ವಜ ಹಿಡಿದು ಭಕ್ತರ ಮನೋಅಂಗಳದಲ್ಲಿ ಬಿದ್ದಿದ್ದ ಕಸ, ಕಳೆ ತೆಗೆಯಲು ಶುರು ಮಾಡಿದರು. ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವನ್ನು ಸಂಘಟಿಸಿದರು. ಜನರಲ್ಲಿ ಧರ್ಮದ ಅರಿವು ಜಾಗೃತಗೊಳಿಸಿದರು.

7. ಕನ್ನಡ ಕಲಿಕಾ ಜಾಗೃತಿ:

ಚನ್ನಬಸವ ಪಟ್ಟದ್ದೇವರ ಶೈಕ್ಷಣಿಕ ಸಾಧನೆ ಅನುಪಮವಾದುದು. ಅವರ ನಿಸ್ವಾರ್ಥ ದುಡಿಮೆಯೇ ಬೀದರ್ ಜಿಲ್ಲೆಯಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಉಂಟು ಮಾಡುವಲ್ಲಿ ಸಹಕಾರಿಯಾಯಿತು. ವಿಜಯನಗರದ ಪತನದ ನಂತರ ಅಂದರೆ ೧೫೬೫ರಿಂದ ೨೦ನೇ ಶತಮಾನದ ೧೯೩೬ರವರೆಗೆ ಒಂದೇ ಒಂದು ಕನ್ನಡ ಶಾಲೆ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಇರಲಿಲ್ಲ. ಉರ್ದು, ಮರಾಠಿ ಭಾಷೆಯ ಪ್ರಾಬಲ್ಯದಿಂದಾಗಿ ಕನ್ನಡ ಭಾಷೆ ನಲುಗಿ ಹೋಗಿತ್ತು. ಈ ಮಧ್ಯೆ ಪಾರ್ಶಿಯನ್ ಭಾಷೆ ಕೂಡ ತಲೆ ಎತ್ತಿತ್ತು. ಕರ್ನಾಟಕದಲ್ಲೇ ಕನ್ನಡ ಅನಾಥ ಭಾಷೆ ಎಂಬ ಸ್ಥಿತಿಯಲ್ಲಿತ್ತು.

ತಮ್ಮ ಪಟ್ಟಾಧಿಕಾರ ಕಾರ್ಯಕ್ರಮದ ನಂತರ ಕಾರಮುಂಗಿ, ಮೋರ್ಗಿ, ವಲ್ಲೇಪುರ, ಡೋಣಗಾಪುರ ಮುಂತಾದ ಊರುಗಳಲ್ಲಿ ಮಠಕ್ಕೆ ಸಂಬಂಧಿಸಿದ ಪರಕೀಯರ ವಶದಲ್ಲಿದ್ದ ಭೂಮಿಯನ್ನು ಮಠದ ವಶಕ್ಕೆ ತೆದೆದುಕೊಂಡರು. ಕನ್ನಡ ಭಾಷೆ, ಕನ್ನಡದ ಜನತೆಯನ್ನು ಪಾರು ಮಾಡಲು ಹಳ್ಳಿ ಹಳ್ಳಿಗೆ ತೆರಳಿ ಕನ್ನಡದ ಕೆಚ್ಚು ತುಂಬಿದರು. ಶಿವಾನುಭವ ಗೋಷ್ಠಿಗಳನ್ನು ನಡೆಸಿದರು. ಶಿವಯೋಗ ಮಂದಿರದ ಕುಮಾರೇಶ್ವರರ ಅಣತಿಯಂತೆ ಕನ್ನಡದ ಜಾಗೃತಿ ಕುರಿತು ಅನೇಕ ರಚನಾತ್ಮಕ ಮತ್ತು ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಬಸವಾದಿ ಶರಣರು ವಚನ ರಚನೆ ಮಾಡಿದ್ದು, ಕನ್ನಡದಲ್ಲಿಯೇ ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎನ್ನುವ ಕವಿ ವಾಣಿಯಂತೆ ಕನ್ನಡದ ಶರಣರ ವಾಣಿಯನ್ನು ಮನೆ ಮನಕ್ಕೆ ಮುಟ್ಟಿಸಿದರು. ಇವರ ಈ ಜಾಗೃತಿ ಕಾರ್ಯಕ್ರಮಗಳಿಂದ ಕನ್ನಡದ ಲಿಂಗಾಯತರು, ಲಿಂಗಾಯತ ಮಠಗಳು, ದಲಿತರು, ಕುರುಬರು, ಕಾಲಜ್ಞಾನ ಸಾರುವ ಅಯ್ಯನವರು, ಪಂಚಾಂಗ ಹೇಳುವವರು, ಕೊರವರು, ಹೆಳವರು, ಬುಡುಕರು ಸೇರಿ ಕನ್ನಡ ಸಂರಕ್ಷಿಸಲು ಮುಂದಾದರು. ಮೋರ್ಗಿಯಲ್ಲಿ ಮೊಟ್ಟ ಮೊದಲ ಕನ್ನಡ ಶಾಲೆ ಆರಂಭಿಸಿದರು. ಮಠದ ಹೊರಗಡೆ ಉರ್ದು ಬೋರ್ಡ್ ಹಾಕಿ ಒಳಗಡೆ ಕನ್ನಡ ಕಲಿಸತೊಡಗಿದರು. ವಿಶ್ವಗುರು ಬಸವಣ್ಣ ಬಿಟ್ಟ ಯಜ್ಞದ ಕುದುರೆಯಂತೆ ಕನ್ನಡದ ಪಾಂಚಜನ್ಯ ಎಲ್ಲೆಡೆ ಮೊಳಗಿಸಿದರು.

8. ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಆರಂಭ:

ಆಗಿನ ಬೀದರ್ ಜಿಲ್ಲೆಯ ನಾರಾಯಣಖೇಡ ತಾಲ್ಲೂಕಿನ ಮೋರ್ಗಿಯಲ್ಲಿ ೧೯೩೩ರ ಬಸವ ಜಯಂತಿಯಂದು ಶಾಂತಿವರ್ಧಕ ಹೆಸರಿನ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಇದಕ್ಕೆ ಸುತ್ತಲಿನ ಹಳ್ಳಿಗಳ ಪ್ರಮುಖರ ಸಭೆ ನಡೆಸಿ ಒಪ್ಪಿಗೆ ಪಡೆದುಕೊಂಡರು. ಶಾಂತಿ ವರ್ಧಕ ಶಾಲೆ ಎಂದೇ ವರ್ಗಗಳನ್ನು ಆರಂಭಿಸಿದರು. ಚನ್ನಬಸವ ಪಟ್ಟದ್ದೇವರು ಸಂಸ್ಥಾಪಕ ಸಂಚಾಲಕರೆಂದು ಆಯ್ಕೆಯಾದರು. ಶ್ರೀ ಅಪ್ಪಾರಾವ ಶೆಟಕಾರ ನಾರಾಯಣಖೇಡ ಎಂಬುವವರು ಅಧ್ಯಕ್ಷರಾಗಿ ಆಯ್ಕೆಗೊಂಡರು. ಗೋವಿಂದರಾವ ದೇಶಪಾಂಡೆ ಉಪಾಧ್ಯಕ್ಷ, ಬಸವಂತರಾವ ಶೆಟಕಾರ ಕಾರ್ಯದರ್ಶಿ ಎಂದು ಆಯ್ಕೆಯಾದರು. ಸಿದ್ದಪ್ಪ ಚೆಪ್ಪೆ, ಬಸಪ್ಪ ಕೊಟಾಳೆ, ವೀರಸಂಗಪ್ಪ ಪೊಲೀಸ್ ಪಾಟೀಲ, ಕಾಮಶೆಟ್ಟೆಪ್ಪ ಮೂಲಗೆ, ಶೇಷರಾವ ಪಾಟೀಲ, ಹಣಮಂತರಾವ ಕೇಶವಾರ, ಅಡೆಪ್ಪ ತೋರ್ಪೆ, ಹಾವಗಿ ಪಾಟೀಲ ಶಂಕರೆಪ್ಪ, ಸಂಗಪ್ಪ ಪಾಟೀಲ ಹೊಕರಾಣಿ, ಮಾರುತೆಪ್ಪ ಪಾಟೀಲ ಗುಡೂರ, ಮಾಣಿಕರಾವ ಪಾಟೀಲ ಶಾಪೂರ ಸದಸ್ಯರಾಗಿ ಆಯ್ಕೆಯಾದರು. ಈ ಶಾಲೆ ದೇಣಿಗೆ ಮೇಲೆ ಎಷ್ಟು ದಿನ ನಡೆಯಬಲ್ಲದು? ಎಂದು ಜನರು ಕೇಳಿದರು. ಆಗ ಮುಷ್ಠಿ ಫಂಡ್ ಮೂಲಕ ಪೂಜ್ಯರು ಕನ್ನಡ ಶಾಲೆ ಆರಂಭಿಸಿದರು. ನಂತರ ಸಂಗಮ, ಲಾತೂರ್‌ನಲ್ಲೂ ಸ್ಥಳೀಯರ ನೆರವಿನಿಂದ ಶಾಲೆ ಶುರು ಮಾಡಿದರು. ಪೂಜ್ಯರ ಶ್ರಮದಿಂದಾಗಿ ಆಗ ಗಡಿ ಭಾಗದಲ್ಲಿ ಕನ್ನಡ ಡಿಂಡಿಮ ಮೊಳಗಿತು.

ಸದಾ ಶಿವನಿಗೆ ಅದೇ ಧ್ಯಾನ ಎನ್ನುವಂತೆ ಪೂಜ್ಯರು ಯಾವಾಗಲೂ ಕನ್ನಡದ ಬಗ್ಗೆಯೇ ಧ್ಯಾನ ಮಾಡುತ್ತಿದ್ದರು. ಕುಂತರೂ, ನಿಂತರೂ ಜೀವಕ್ಕಿಲ್ಲ ಸಮಾಧಾನ ಎನ್ನುವಂತೆ ಅವರ ಮನಸ್ಸಿನ ತುಂಬ ಸದಾ ಕನ್ನಡ ಕುಣಿದಾಡುತ್ತಿತ್ತು. ಲಗ್ನಪತ್ರಗಳು, ಕಾರ್ಯಕ್ರಮದ ಆಮಂತ್ರಣ ಪತ್ರಿಕೆಗಳು ಸಹ ಕನ್ನಡದಲ್ಲೇರಬೇಕು ಎಂದು ಬಯಸುತ್ತಿದ್ದರು. ಒಂದುವೇಳೆ ಅವು ಬೇರೆ ಭಾಷೆಯಲ್ಲಿದ್ದರೆ ಕೈಯಲ್ಲಿ ಸಹ ಹಿಡಿಯದೆ ಎಸೆದು ಬಿಡುತ್ತಿದ್ದರು. ಕನ್ನಡದ ಸಂರಕ್ಷಣೆಗಾಗಿ ಸಂಯುಕ್ತ ಕರ್ನಾಟಕ ಸಂಘವೊಂದನ್ನು ಹುಟ್ಟು ಹಾಕಿದರು. ಬೀದರ್ ಜಿಲ್ಲೆಯು ಇಡೀಯಾಗಿ ಕರ್ನಾಟದೊಳಗೆ ಸೇರ್ಪಡೆಯಾಗಬೇಕು ಎಂದು ಆಲೂರ ಬಸಪ್ಪ, ಜಯತೀರ್ಥ ರಾಜಪುರೋಹಿತ ಮುಂತಾದವರ ಜೊತೆ ಹೋರಾಟಕ್ಕಿಳಿದರು.

9. ಕರ್ನಾಟಕ ಏಕೀಕರಣದ ಹೋರಾಟ:

ಹೈದರಾಬಾದ್ ನಿಜಾಮ ಆಳರಸನ ಸೇನಾ ಮುಖ್ಯಸ್ಥನಾಗಿದ್ದ ಕಾಸಿಂ ರಜ್ವಿಯ ರಜಾಕಾರರ ಹಾವಳಿ ಈ ಭಾಗದಲ್ಲಿ ಹೆಚ್ಚಾಯಿತು. ಇದನ್ನರಿತ ರಾಯಚೂರು, ಗುಲ್ಬರ್ಗ, ಬೀದರ್ ಜನತೆ ಸೊಲ್ಲಾಪುರವನ್ನೇ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ರಜಾಕಾರರ ಪಡೆ ವಿರುದ್ಧ ಚನ್ನಬಸವ ಪಟ್ಟದ್ದೇವರ ನೇತೃತ್ವದಲ್ಲಿ ಯುದ್ಧ ಸಾರಿದರು. ಸೊಲ್ಲಾಪುರದಲ್ಲಿ ಬಂದು ಬೀಡು ಬಿಟ್ಟಿದ್ದ ಜನರಿಗೆ ದಾಸೋಹ ಮಾಡಲು ಮನೆ ಮನೆಗೆ ತಿರುಗಾಡಿದರು. ಇವರ ಜತೆಗೆ ಜಯದೇವಿ ತಾಯಿ ಲಿಗಾಡೆ, ವಾರದ ಮಲ್ಲಪ್ಪ, ನಾಗಪ್ಪ ಕಾಡಾದಿ ಮುಂತಾದ ಪ್ರಮುಖರು ಇದ್ದರು. ಸೊಲ್ಲಾಪುರದಲ್ಲಿಯೇ ಕುಂಟೋಜಿಮಠದ ಪೂಜ್ಯ ಸಿದ್ಧರಾಮ ಸ್ವಾಮಿಗಳ ನೆರವಿನಿಂದ ಅಲ್ಲೊಂದು ಕಾಡಾದಿ ಶಾಲೆ ಪ್ರಾರಂಭವಾಯಿತು. ಇತರೆಡೆಗಳಿಂದ ಬಂದಿದ್ದವರ ಮಕ್ಕಳಿಗಾಗಿ ಕನ್ನಡ ಶಾಲೆ ತೆರೆಯಲಾಯಿತು. ಹೈದರಾಬಾದ್ ಸಂಸ್ಥಾನ ವಿಮೋಚನೆ ನಂತರ ಮತ್ತೆ ಕಲ್ಯಾಣದತ್ತ ಪ್ರಯಾಣ ಬೆಳೆಸಿದರು. ಇದಾದ ಬಳಿಕ ಕರ್ನಾಟಕದ ಏಕೀಕರಣ ಚಳವಳಿ ಆರಂಭವಾಯಿತು. ಚಲುವಾದ ಕನ್ನಡ ನಾಡು ಒಂದಾಗಲು ಪೂಜ್ಯರೂ ಅಹರ್ನಿಷಿ ಶ್ರಮಿಸಿದರು. ಇವರು ಆರಂಭಿಸಿದ್ದ ಕನ್ನಡ ಶಾಲೆಗಳಿಂದಾಗಿಯೇ ಜಿಲ್ಲೆಯ ವಿವಿಧ ಗ್ರಾಮಗಳು ಕರ್ನಾಟಕದಲ್ಲಿ ಒಂದಾದವು.

ಒಂದೆಡೆ "ಝೂಲಾಚ್ ಪಾಹಿಚೆ" ಎಂಬ ಹಠವಾದಿ ಮರಾಠಿಗರು, ಇನ್ನೊಂದೆಡೆ "ಕಾಟೋ, ಲೂಟೋ, ಆಪ್‌ಸಮೆ ಬಾಟೋ" ಎಂದು ಅಟ್ಟಹಾಸಗೈಯುವ ರಜಾಕರರು ಈ ಇಬ್ಬರ ಮಧ್ಯೆ ಸಿಕ್ಕ ತಾಯ್ನಾಡಿನ ನೆಲದ ಭಾಷೆ ಕನ್ನಡವನ್ನು ಕೇಳುವವರೆ ಇರಲಿಲ್ಲ. ಆಡಳಿತ ಭಾಷೆ ಉರ್ದು, ವ್ಯವಹಾರದ ಬಾಷೆ ಮರಾಠಿ. ಹೀಗಾಗಿ ಕನ್ನಡ ಭಾಷೆ ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾಗಿತ್ತು. ಒಂದು ಕಾಲದಲ್ಲಿ ಕನ್ನಡದ ವಚನಗಂಗೋತ್ರಿ ಹರಿಸಿದ ಈ ಭೂಮಿಯಲ್ಲಿ ಕನ್ನಡದ ಸ್ಥಿತಿ ದಯನೀಯವಾಗಿತ್ತು. ಕನ್ನಡದ ಈ ದುರ್ದೆಸೆಗೆ ಹೈದರಾಬಾದ್ ನಿಜಾಮನ ಆಡಳಿತವೇ ಕಾರಣವಾಗಿತ್ತು.

ಇಂತಹ ವಿಷಮ ಸನ್ನಿವೇಶದಲ್ಲಿ ಕನ್ನಡದ ಕತ್ತುರಿಯ ಪರಿಮಳವ ಸುತ್ತೆಲ್ಲ ಹಬ್ಬಿಸುವ ದೀಕ್ಷೆ ತೊಟ್ಟವರು ನಮ್ಮ ಚನ್ನಬಸವ ಪಟ್ಟದ್ದೇವರು. ನಿಜಾಮ ಆಡಳಿತದಲ್ಲಿ ಉರ್ದು ಮಾಧ್ಯಮದ ಶಾಲೆಗಳೇ ಇದ್ದವು. ಅಂತಹ ಪರಿಸ್ಥಿತಿಯಲ್ಲಿ ಕನ್ನಡ ಕಲಿಯುವುದು ಮತ್ತು ಕಲಿಸುವುದು ಮಹಾ ಅಪರಾಧವಾಗಿತ್ತು. ಕನ್ನಡ ಶಾಲೆ ತೆರೆಯಲು ನಿಜಾಮ ಸರ್ಕಾರ ಅನುಮತಿ ನೀಡುತ್ತಿರಲಿಲ್ಲ. ಒಂದು ವೇಳೆ ಕನ್ನಡ ಕಲಿಸಿದರೆ ಅವರ ವಿರುದ್ಧ ಕಠಿಣ ಶಿಕ್ಷೆ ನೀಡಲಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ಕನ್ನಡ ಶಾಲೆ ಆರಂಭಿಸಿ ಕಲಿಯುವ ಮಕ್ಕಳಿಗೆ ಊಟ, ವಸತಿ ಸೌಕರ್ಯ ಕಲ್ಪಿಸಿ ಅದಕ್ಕಾಗಿ ತಾವು ಊರೂರು ಸುತ್ತಾಡಿ ಈ ನಿಟ್ಟಿನಲ್ಲಿ ಜನರನ್ನು ಜಾಗೃತಗೊಳಿಸಿದರು. ಭಾವಶುದ್ಧವಿದ್ದಲ್ಲಿ ಭಾಗ್ಯ ತಾನಾಗಿಯೇ ಒಲಿದು ಬರುತ್ತದೆ ಎನ್ನುವಂತೆ ಪೂಜ್ಯರ ಹೋರಾಟದ ಫಲ ಎನ್ನುವಂತೆ ಲಾತೂರ್, ಭಾಲ್ಕಿ, ಉದ್ಗೀರ್, ಬೀದರ್, ಜಹೀರಾಬಾದ್ ಇನ್ನಿತರ ಕಡೆ ಕನ್ನಡ ಕಲಿಸುವಂತಾಯಿತು.

ಕನ್ನಡಕ್ಕಾಗಿ ಪೂಜ್ಯರು ಕೈಗೊಂಡಿದ್ದ ಕನ್ನಡದ ಜಾಗೃತಿಯಿಂದಾಗಿ ಕರ್ನಾಟಕದ ಏಕೀಕರಣ ಚಳವಳಿಯಲ್ಲಿ ಜನ ಭಾಗವಹಿಸುವಂತಾಯಿತು. ಕನ್ನಡದ ಕಹಳೆ ಮೊಳಗಿಸಿದರು. ಹೀಗಾಗಿಯೇ ಅನ್ಯ ರಾಜ್ಯದವರ ಪಾಲಾಗಲಿದ್ದ ಕನ್ನಡದ ಈ ನೆಲ ಅಖಂಡ ಕರ್ನಾಟಕದಲ್ಲಿ ಒಂದಾಯಿತು.

10. ಅಭಿನವ ಅನುಭವ ಮಂಟಪ:

೧೨ನೇ ಶತಮಾನದ ಬಸವಾದಿ ಶರಣರು ಕಲ್ಯಾಣವನ್ನು ಕೇಂದ್ರವಾಗಿಟ್ಟುಕೊಂಡು ನಡೆಸಿದ ವಚನ ಚಳವಳಿ ಹಾಗೂ ಅವರು ಬಸವಕಲ್ಯಾಣದಲ್ಲಿ ಆಗಿನ ಕಾಲದಲ್ಲಿ ಸ್ಥಾಪಿಸಲಾಗಿದ್ದ ಅನುಭವ ಮಂಟಪದ ವಿಷಯ ತಮಗೆಲ್ಲರಿಗೂ ಗೊತ್ತಿರುವ ವಿಷಯ. ಇಂದಿನ ಪಾರ್ಲಿಮೆಂಟ್ (ಪ್ರಜಾಪ್ರಭುತ್ವ) ವ್ಯವಸ್ಥೆಯನ್ನು ಅಂದೇ ಜಾರಿಗೆ ತಂದಿದ್ದ ಶರಣರದ್ದು ಕಲ್ಯಾಣ ಕರ್ನಾಟಕದ ಕನಸಿತ್ತು. ಇಂತಹ ಅನುಭವ ಮಂಟಪದ ಸ್ಮರಣಾರ್ಥವಾಗಿ ಅದೇ ಸ್ಥಳದಲ್ಲಿ ಒಂದು ಕಟ್ಟಡ ಕಟ್ಟಬೇಕು ಎನ್ನುವ ಬಸವ ಭಕ್ತರ ಇಚ್ಛೆಯಾಗಿತ್ತು. ೧೯೫೪ರಲ್ಲಿ ಬಸವಕಲ್ಯಾಣದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಸಮ್ಮೇಳನವೊಂದು ಜರುಗಿತು. ಈ

ಸಮ್ಮೇಳನಕ್ಕೆ ಆಗಮಿಸಿದ ಮೈಸೂರಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರು ಬಸವ ಕಲ್ಯಾಣದ ಮರಿದೇವರ ದಿಬ್ಬದ ಮೇಲೆ ಅನುಭವ ಮಂಟಪ ಕಟ್ಟಡದ ಅಡಿಗಲ್ಲು ಇರಿಸಿದರು.

ಕನ್ನಡಿಗರು ಕೇವಲ ಆರಂಭ ಶೂರರು ಎನ್ನುವ ಮಾತಿನಂತೆ ಸುಮಾರು ೧೭ ವರ್ಷಗಳವರೆಗೆ ಅನುಭವ ಮಂಟಪ ಕಟ್ಟಡ ಮೇಲಕ್ಕೇರದೆ ಅರ್ಧಕ್ಕೆ ನಿಂತು ಹೋಗಿತ್ತು. ಶರಣರ ಸ್ಮಾರಕಗಳನ್ನು ನೋಡಲು ಇಲ್ಲಿಗೆ ಬಂದವರು ಈ ಅವಸ್ಥೆ ನೋಡಿ ಒಳಗೊಳಗೆ ಸಂಕಟ ಅನುಭವಿಸುತ್ತಿದ್ದರು. ಧಾರವಾಡದ ಮುರುಘಾ ಮಠದ ಮಹಾಂತ ಸ್ವಾಮಿಗಳ ಅಪ್ಪಣೆಯಂತೆ ಚನ್ನಬಸವ ಪಟ್ಟದ್ದೇವರು ಅನುಭವ ಮಂಟಪ ಕನ್ನಡ ನಿರ್ಮಾಣದ ಕಾರ್ಯವನ್ನು ಹೆಗಲಿಗೇರಿಸಿಕೊಂಡರು. ಆರಂಭದಲ್ಲಿ ಭೀಮಣ್ಣ ಖಂಡ್ರೆಯವರೆ ಪೂಜ್ಯರ ಉಡಿಯಲ್ಲಿ ೨೫ ಸಾವಿರ ರೂಪಾಯಿ ಹಾಕಿದರು. ಬೆಂಗಳೂರಿನ ಬಸವ ಸಮಿತಿ ಅನುಭವ ಮಂಟಪ ಕಟ್ಟಡ ನಿರ್ಮಾಣಕ್ಕೆ ತೆಗೆದಿರಿಸಿದ, ಸಂಗ್ರಹಿಸಿದ ಹಣವನ್ನು ಸಹ ಕೊಡಿಸುವುದಾಗಿ ಖಂಡ್ರೆ ಭರವಸೆ ನೀಡಿದರು. ಜನರ ಬಳಿ ಚಂದಾ ಹಣ, ದೇಣಿಗೆ ಸಂಗ್ರಹಿಸಿದರು. ಅನುಭವ ಮಂಟಪದ ಮೇಲಿರುವ ಲಿಂಗದ ನಿರ್ಮಾಣವನ್ನು ಒಂದೇ ದಿನದಲ್ಲಿ ಮುಗಿಸಿದರು. ಭೀಮಣ್ಣ ಖಂಡ್ರೆ ಮತ್ತು ಮಹಾದೇವಪ್ಪ ಮೀಸೆ ಪೂಜ್ಯರ ಜೊತೆಯಲ್ಲಿ ಮಾಲು ಹೊತ್ತು ಹಾಕಿ ಬೆಳಗಾಗುವದರೊಳಗೆ ಈ ಕಾರ್ಯ ಮುಗಿಸಿದರು. ಸ್ವತಃ ತಾವೇ ಕಲ್ಲು ಮಣ್ಣು, ಕಾಂಕ್ರಿಟ್ ಹೊತ್ತು ಕಟ್ಟಡ ತಲೆ ಎತ್ತಿ ನಿಲ್ಲುವಂತೆ ಮಾಡಿದರು. ಪೂಜ್ಯರ ಪರಿಶ್ರಮದಿಂದಾಗಿಯೇ ಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪ ವೈದಾಳುವ ಮೂಲಕ ಕಲ್ಯಾಣದ ಹಿಂದಿನ ವೈಭವವು ಮರುಕಳಿಸುವಂತಾಗಿದೆ.

11. ಸಾಧನೆ, ಸಿದ್ಧಿ

ಕೇವಲ ನಾಲ್ಕು ಗೋಡೆಗಳ ಮಠ ಕಟ್ಟಿಕೊಂಡು ಪೂಜೆ, ಪುನಸ್ಕಾರಕ್ಕೆ ಮಾತ್ರ ಸೀಮಿತವಾಗಿರದ ಚನ್ನಬಸವ ಪಟ್ಟದ್ದೇವರು ತಮ್ಮ ಅಧಿಕಾರಾವಧಿಯಲ್ಲಿ ಸಾಕಷ್ಟು ಸಮಾಜಮುಖಿ ಕೆಲಸಗಳನ್ನು ಕೈಗೆತ್ತಿಕೊಂಡಿದ್ದರು. ದಲಿತರ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದರು. ದೀನ ದಲಿತರನ್ನು ಮೇಲೆತ್ತುವುದಕ್ಕಗಿಯೇ ಹುಟ್ಟಿ ಬಂದಂತಿದ್ದರು. ಇದು ಕೇವಲ ಬಾಯುಪಚಾರದ ಮಾತಾಗಿರಲಿಲ್ಲ. ದಲಿತರಿಗೆ ಲಿಂಗದೀಕ್ಷೆ ನೀಡಿದರು. ಇದಕ್ಕೆ ಕೌಟಾ (ಬಿ) ಗ್ರಾಮದ ಬೆಲ್ದಾಳ ಸಿದ್ಧರಾಮ ಶರಣರೆ ಕಣ್ಣೆದುರಿನ ಉದಾಹರಣೆಯಾಗಿದ್ದಾರೆ. ದಲಿತರಿಂದ ಸವರ್ಣೀಯರ ಭಾವಿಯ ನೀರನ್ನು ಮೇಲೆತ್ತಿಸಿ ಕುಡಿಸಿದರು. ದಲಿತರಿಗೆ ದೇವಾಲಯದೊಳಕ್ಕೆ ಪ್ರವೇಶ ಕಲ್ಪಿಸಿದರು. ಇದನ್ನು ಸಹಿಸದ ಸಮಕಾಲೀನ ಸಮಾಜ ಅವರನ್ನು ವಕ್ರದೃಷ್ಟಿಯಿಂದ ನೋಡಿತು. ಕೆಲವರು ಶ್ರೀಗಳೊಂದಿಗೆ ಅನುಚಿತವಾಗಿ ನಡೆದುಕೊಂಡರು. ಅವರ ಅನುಚಿತ ವರ್ತನೆಯಿಂದ ಪೂಜ್ಯರು ತುಂಬಾ ನೊಂದುಕೊಂಡರು. ಆದರೆ ನ್ಯಾಯ ನಿಷ್ಠುರಿ ಶರಣ ಆರಿಗೂ ಅಂಜುವವನಲ್ಲ ಎಂಬ ಶರಣರ ವಾಣಿಯಂತೆ ಯಾರಿಗೂ ಹೆದರಲಿಲ್ಲ. ಅವರಿಗೆ ಹಿಂಸೆ ನೀಡಿದವರ ಅಜ್ಞಾನಕ್ಕೆ ಒಳಗೊಳಗೆ ಮರುಗಿದರು. ದುಶ್ಚಟಗಳಿಗೆ ಬಲಿಯಾದ ಜನರ ಚಟ ಬಿಡಿಸಲು ಪಣ ತೊಟ್ಟ ಇವರು ಎಲ್ಲ ಗ್ರಾಮಗಳೀಗೆ ಜೋಳಿಗೆ ಹಿಡಿದು ಸಂಚರಿಸಿ ಅವರನ್ನು ಚಟಮುಕ್ತರನ್ನಾಗಿ ಮಾಡಿದರು. ಅವರಲ್ಲಿ ಸುಜ್ಞಾನದ ಸುಧೆ ಹರಿಯುವಂತೆ ಮಾಡಿದರು.

ಒಮ್ಮೆ ನಾರಾಯಣಖೇಡ ತಾಲೂಕಿನ ನಾಗೂರು ಗ್ರಾಮದಲ್ಲಿ ಚಿಂತನಗೋಷ್ಠಿ ನಡೆದಿತ್ತು. ಕಾರ್ಯಕ್ರಮ ಮುಗಿದಾದ ಬಳಿಕ ಎಲ್ಲರೂ ಪೂಜ್ಯರಿಗೆ ನಮಸ್ಕರಿಸಿ ಪ್ರಸಾದ ಸ್ವೀಕರಿಸಿ ಹೋಗುತ್ತಿದ್ದರು. ಆದರೆ ದೂರದ ಹನುಮಾನ ಕಟ್ಟೆಯ ಮೇಲೆ ಕುಳಿತ ವ್ಯಕ್ತಿಯೊಬ್ಬರು ಪ್ರಸಾದ ಸ್ವೀಕರಿಸುವುದು ಒತ್ತಟ್ಟಿಗಿರಲಿ ಪೂಜ್ಯರ ಸಮೀಪ ಬರುವುದಕ್ಕೆ ಹಿಂದೆ ಮುಂದೆ ನೋಡಿದ. ನೀವು ಬರದೆ ಹೋದರೆ ನಾನು ಇಲ್ಲಿಂದ ಇಳಿಯುವುದಿಲ್ಲ ಎಂದು ಹೇಳಿದರು. ಪೂಜ್ಯರ ಈ ನಡೆಗೆ ಗ್ರಾಮದವರೆಲ್ಲ ಹೆದರಿದರು. ಆದರೆ ಅವರು ಅವರಿಗೆಲ್ಲ ಸಮಾಧಾನ ಹೇಳಿ ಹೊಲೆ ಗಂಡಲ್ಲದೆ ಪಿಂಡದ

ನೆಲೆಗಾಶ್ರಯವಿಲ್ಲ. ಹೊಲೆಯ ಎಂದು ಹೇಳುವುದು ಸರಿಯಲ್ಲ. ಇವನಾರವ ಎಂದೆನ್ನದೆ ಇವ ನಮ್ಮವ ಎನ್ನುಬೇಕು ಎಂದು ಹೇಳಿ ಗ್ರಾಮದವರನ್ನು ಸಮಾಧಾನಪಡಿಸಿದರು. ದಲಿತರಿಗೆ ತಮ್ಮ ಪೂಜಾ ಕೋಣೆಯಲ್ಲಿ ಪ್ರವೇಶ ಮಾಡುವ ಪರವಾನಗಿ ನೀಡಿದರು.

ಔರಾದ್ ತಾಲೂಕಿನ ನಂದಿನಾಗೂರಿನಲ್ಲಿ ೩೦೦ ಜನರಿಗೆ ಲಿಂಗದಿಕ್ಷಾ ಕಾರ್ಯಕ್ರಮವಿತ್ತು. ಆದರೆ ಶ್ರೀಮಂತ ವ್ಯಕ್ತಿಯೊಬ್ಬ ಹೊಲೆಯರಿಗೆ ಲಿಂಗದೀಕ್ಷೆ ಕೊಡುವುದಾದರೆ ನಾನು ಜಾಗ ಕೊಡುವುದಿಲ್ಲ ಎಂದು ವಿದ್ಯುತ್ ಸಂಪರ್ಕ ತೆಗೆದುಬಿಟ್ಟ. ವೇದಿಕೆ ಹರಿದೊಗೆದ. ಆದರೆ ಪೂಜ್ಯರು ಇದಕ್ಕೆ ಹೆದರದೆ " ನಾವು ಹಿರಿಯ ಮಾಹೇಶ್ವರರ ಓಣಿಯಲ್ಲಿ ಈ ಕಾರ್ಯಕ್ರಮ ಮಾಡದೆ ಹೊಲೆಯರ ಓಣಿಯಲ್ಲಿ ಮಾಡುತ್ತಿರುವುದು ನಮ್ಮದೆ ತಪ್ಪು" ಎಂದು ಹೇಳಿ ಅವರ ಓಣಿಯಲ್ಲಿ ಲಿಂಗದೀಕ್ಷೆ ಕೊಡುವ ಕಾರ್ಯ ನೆರವೇರಿಸಿದರು.

ಶ್ರೀಗಳ ಸಂಯಮದ ಈ ನಡೆ ಸರ್ವರ ಮನ ಗೆಲ್ಲುವಲ್ಲಿ ಯಶಸ್ವಿಯಾಯಿತು. ಸ್ತ್ರೀ ಶಿಕ್ಷಣಕ್ಕೂ ಪೂಜ್ಯರು ನಾಂದಿ ಹಾಡಿದರು. ಗ್ರಾಮ ಮಟ್ಟದಿಂದಲೇ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಶ್ರೀಕಾರ ಹಾಕಿಸಿದರು. ಹಳ್ಳಿ ಹಳ್ಳಿಗಳಲ್ಲಿ ಅಕ್ಕನ ಬಳಗ ಹುಟ್ಟು ಹಾಕಿದರು. ಅಲ್ಲಿನ ಮಹಿಳೆಯರಲ್ಲಿ ಶರಣರ ವಚನ, ಭಜನೆ, ಪ್ರಾರ್ಥನೆ, ಸಂಗೀತಗಳ ಬಗ್ಗೆ ಅಭಿರುಚಿ ಬೆಳಸಿ, ಕನ್ನಡ ಜಾಗೃತಿಗೆ ಕಾರಣರಾದರು. ಹೀಗೆ ಬಸವಾದಿ ಪ್ರಮಥರ ಹಾದಿಗೆ ಹಣತೆ ಹಚ್ಚಿ ಬೆಳಕಾದರು.

12. ಸಮರ್ಥ ಉತ್ತರಾಧಿಕಾರಿ:

ಚನ್ನಬಸವ ಪಟ್ಟದದ್ದೇವರು ಸಾಮಾನ್ಯರಲ್ಲ. ಜೀವನದುದ್ದಕ್ಕೂ ಬಸವಣ್ಣ, ವಚನ, ಕನ್ನಡ ಈ ಮೂರು ಕಾರಣಕ್ಕಾಗಿಯೇ ಅವಿಶ್ರಾಂತವಾಗಿ ದುಡಿದು ದುಡಿದು ಹಣ್ಣಾದ ಇವರು, ತಮ್ಮ ಪೀಠಾಧಿಕಾರವನ್ನು ಇನ್ನೊಬ್ಬರಿಗೆ ಒಪ್ಪಿಸಲು ಅಣಿಯಾದರು. ತಮ್ಮ ಮಠಕ್ಕೆ ಯಾರನ್ನು ಉತ್ತರಾಧಿಕಾರಿಯನ್ನಾಗಿ ಮಾಡಬೇಕು ಎಂಬುದನ್ನು ಕಣ್ಣಲ್ಲಿ ಕಣ್ಣಿಟ್ಟು ಹುಡುಕಾಡಲು ಶುರು ಮಾಡಿದರು. ಎಲ್ಲ ಕಡೆ ಸಂಚರಿಸಿ ಮರಿದೇವರ ಹುಡುಕಾಟದಲ್ಲಿ ತೊಡಗಿದರು. ಆದರೆ ಅವರಿಗೆ ಯಾರೊಬ್ಬರೂ ಸೂಕ್ತ ಅನಿಸಲಿಲ್ಲ. ಇಂತಹ ವೇಳೆಯಲ್ಲಿ ಅವರಿಗೆ ಸಿಕ್ಕವರು ಆಂಧ್ರದ ಅಬ್ಬೆಂದಿಯ ಶಿವಯೋಗಿ ಸ್ವಾಮಿಗಳು. ಅವರನ್ನು

ಉತ್ತರ ಭಾರತದ ಕಾಶಿಯ ಜಂಗಮವಾಡಿ ಮಠಕ್ಕೆ ಕಳಹಿಸಿಕೊಟ್ಟರು. ಅವರಿಗೆ ತಾವೆ ತಂದೆ-ತಾಯಿಯಂತೆ ತಿನಿಸಿ ಉಣಿಸಿ ಬಹಳ ಚೆನ್ನಾಗಿ ನೋಡಿಕೊಂಡರು. ಎಲ್ಲವನ್ನು ಮಾಡಿ ಅಣಿಗೊಳಿಸುವಷ್ಟರಲ್ಲಿ ಮಠದಲ್ಲಿ ರಾಜಕಾರಣ ಮತ್ತು ಧರ್ಮಕಾರಣ ಎರಡೂ ತಲೆದೋರಿದವು. ಇದರಿಂದ ಭಾಲ್ಕಿ ಹಿರೇಮಠದಲ್ಲಿ ಮತ್ತೆ ಅಂಧಕಾರ ಆವರಿಸಿತು.

ಆದರೆ ಪೂಜ್ಯರು ಸುಮ್ಮನೆ ಕೈ ಕಟ್ಟಿ ಕುಳಿತುಕೊಳ್ಳಲಿಲ್ಲ. ಮತ್ತೆ ಮರಿದೇವರ ಹುಡುಕಾಟಕ್ಕಿಳಿದರು. ಆಗ ಅವರ ಕಣ್ಣಿಗೆ ಬಿದ್ದವರು ಆಂಧ್ರದ ನಾರಾಯಣಖೇಡ ತಾಲ್ಲೂಕಿನ ನಾಗೂರು ಗ್ರಾಮದ ಶಿವರಾಜ ಕಾಡೊದೆ ಎಂಬುವವರು. ಪೂಜ್ಯರಿಂದ ಜಂಗಮ ದೀಕ್ಷೆ ಪಡೆದ ಶಿವರಾಜರು ಶಿವಲಿಂಗ ದೇವರು ಆದರು. ಭಾಲ್ಕಿಯ ಹಿರಿಯ ಅಪ್ಪಗಳು ತಾವು ಹೋದಲ್ಲಿ ಬಂದಲ್ಲಿ ಶಿವಲಿಂಗ ದೇವರನ್ನು ಕರೆದೊಯ್ಯುತ್ತಿದ್ದರು. ಶಿವಲಿಂಗ ದೇವರಿಗೆ ಸರಿಯಾದ ಸಂಸ್ಕಾರ ನೀಡಿದರು. ಧರ್ಮದ ಮಾರ್ಗ ತೋರಿದರು. ಸಂಗೊಳಗಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರನ್ನು ಉತ್ತರಾಧಿಕಾರಿಯನ್ನಾಗಿ ಮಾಡುವ ಸುಳುಹು ಬಿಟ್ಟುಕೊಟ್ಟರು. ೨-೬-೧೯೮೫ರಂದು ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರನ್ನು ತಮ್ಮ ಮಠಕ್ಕೆ ನೂತನ ಉತ್ತರಾಧಿಕಾರಿಯನ್ನಾಗಿ ನಿಯುಕ್ತಿಗೊಳಿಸಿದರು.

13. ಪ್ರಶಸ್ತಿ-ಪುರಸ್ಕಾರ:

ಚನ್ನಬಸವ ಪಟ್ಟದ್ದೇವರು ಯಾವುದೇ ಪ್ರಶಸ್ತಿ ಪುರಸ್ಕಾರಗಳಿಗಾಗಿ ಬೆನ್ನು ಹತ್ತಲಿಲ್ಲ. ಅಥವಾ ಪ್ರಶಸ್ತಿ ಪುರಸ್ಕಾರಗಳ ದೃಷ್ಟಿಯಿಟ್ಟುಕೊಂಡು ಸಮಾಜ ಸೇವೆ ಮಾಡಿರಲಿಲ್ಲ. ತಾನು ಹುಟ್ಟಿದ ಮಣ್ಣಿನ ಋಣ, ಅನ್ನದ ಋಣ ತೀರಿಸಲು ಅಹರ್ನಿಷಿ ಶ್ರಮಿಸಿದರು. ದೇಶ ಸೇವೆಯೇ ಈಶ ಸೇವೆ, ಜನಸೇವೆಯೇ ಜನಾರ್ದನನ ಸೇವೆ ಎಂಬಂತೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತ ಹೋದರು. ಇವರ ಸದ್ದು ಗದ್ದಲವಿಲ್ಲದ ಸೇವೆಯನ್ನು ಗಮನಿಸಿ ಕರ್ನಾಟಕ ಸರ್ಕಾರ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ ನೀಡಿ ಗೌರವಿಸಿತು. ಗುಲ್ಬರ್ಗ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಸತ್ಕರಿಸಿತು. ಇವೆಲ್ಲಕ್ಕಿಂತ ಮಿಗಿಲು ಎಂಬಂತೆ ಜನಮನದಲ್ಲಿ ಇವರ ಹೆಸರು ಚಿರಸ್ಥಾಯಿಯಾಗಿದೆ. ಇದಕ್ಕಿಂತ ಮಿಗಿಲಾದ ಪ್ರಶಸ್ತಿ ಮತ್ತೊಂದಿಲ್ಲ.

14. ಬಯಲೊಳಗೆ ಬಯಲಾದ ಮಹಾ ಬೆಳಗು:

ಸುಮಾರು ೬೧ ವರ್ಷಗಳ ಕಾಲ ತಮಗೆ ವಹಿಸಿದ್ದ ಪಟ್ಟಾಧಿಕಾರವನ್ನು ಸುಸೂತ್ರ ಹಾಗೂ ಅತ್ಯಂತ ಸಮರ್ಥವಾಗಿ ಮುನ್ನಡೆಸಿಕೊಂಡು ಬಂದಿದ್ದ ಮ.ಘ.ಚ ಡಾ. ಚನ್ನಬಸವ ಪಟ್ಟದ್ದೇವರು ೧೯೮೨ರಲ್ಲಿ ಒಂದು ಸಲ ಅನಾರೋಗ್ಯಕ್ಕೆ ತುತ್ತಾಗಿದ್ದರು. ಶಸ್ತ್ರ ಚಿಕಿತ್ಸೆ ಆಗ ಅನಿವಾರ್ಯವಾಯಿತು. ಕಲ್ಬುರ್ಗಿಯ ಬಸವೇಶ್ವರ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ಕೊಡಿಸಲಾಯಿತು. ಇದಕ್ಕಾಗಿ ಅವರಿಗೆ ಹೊರಗಿನಿಂದ ರಕ್ತ ಕೊಡುವುದು ಅನಿವಾರ್ಯವಾಯಿತು. ಕಮಲಾನಗರದ ಸುತ್ತ ಮುತ್ತ ರಕ್ತ ಪರೀಕ್ಷೆ ಮಾಡಿದರೆ ಪೂಜ್ಯರಿಗೆ ಮೈಗೆ ಹೊಂದುವಂತಹ ರಕ್ತ ಸಿಗಲಿಲ್ಲ. ಕೊನೆಗೆ ಡಾ. ವಿಶ್ವನಾಥ ಚಿಕ್ಕಮುರ್ಗೆಯವರು ರಕ್ತ ಹೊಂದಿತು. ಅವರು ರಕ್ತದಾನ ಮಾಡಿದರು. ಇದರಿಂದಾಗಿ ಪೂಜ್ಯರು ತಮಗೆ ಒದಗಿ ಬಂದಿದ್ದ ಮೊದಲ ಗಂಡಾಂತರಿಂದ ಪಾರಾದರು. ಅನಾರೋಗ್ಯದ ಈ ಸಮಯದಲ್ಲಿ ಸುಮಾರು ಮೂರು ತಿಂಗಳವರೆಗೆ ಶರಣ ನಾಗಶೆಟ್ಟೆಪ್ಪ ಶಿವ ಕರಣ ದಂಪತಿಗಳು ಪೂಜ್ಯರ ಸೇವೆಗೈದರು.

೧೯೯೯ ಏಪ್ರಿಲ್ ತಿಂಗಳಲ್ಲಿ ಡಾ. ಚನ್ನಬಸವ ಪಟ್ಟದ್ದೇವರು ಮತ್ತೆ ಅನಾರೋಗ್ಯಕ್ಕೆ ತುತ್ತಾದರು. ಈ ಸಲ ಸ್ವತಃ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಅವರ ಸೇವೆ ಮಾಡಿದರು. ಹಗಲಿರುಳು ಅವರ ಸೇವೆಯಲ್ಲಿ ತೊಡಗಿರುತ್ತಿದ್ದರು. ವಯೋಸಹಜ ಅನಾರೋಗ್ಯಕ್ಕೆ ಒಳಗಾದ ಶತಾಯುಷಿ ಡಾ. ಚನ್ನಬಸವ ಪಟ್ಟದ್ದೇವರು ೧೯೯೯ ಏಪ್ರಿಲ್ ೨೨ರ ರಾತ್ರಿ ೮.೨೦ಕ್ಕೆ ಬಯಲೊಳಗೆ ಬಯಲಾದರು. ಸರ್ವರ ಬಾಳಿಗೆ ಬೆಳಕು ನೀಡಿದ್ದ ಲೋಕ ಸೂರ್ಯನೊಬ್ಬ ಅಸ್ತಮಾನಗೊಂಡಂತಾಯಿತು.

ಕಂಗಳು ತುಂಬಿದ ಬಳಿಕ ನೋಡಲಿಲ್ಲ
ಕವಿಗಳು ತುಂಬಿದ ಬಳಿಕ ಕೇಳಲಿಲ್ಲ
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ
ಮನ ತುಂಬಿದ ಬಳಿಕ ನೆನೆಯಲಿಲ್ಲ
ಮಹಾಂತ ಕೂಡಲಸಂಗಮದೇವನ

15. ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು:

ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಸಾಮಾಜಿಕ ಸಾಮರಸ್ಯ, ಧರ್ಮಸಹಿಷ್ಣುತೆಗೆ ಹೆಸರಾದವರು. ದಯೆ ಜೀವನಪ್ರೀತಿ, ಮೈಗೂಡಿಸಿಕೊಂಡ ಮಾತೃಹೃದಯಿಗಳು. ಕೃಷಿ ಅಭಿವೃದ್ಧಿ, ಉಚಿತ ಪ್ರಸಾದ, ಗಡಿಭಾಗದಲ್ಲಿ ಮಕ್ಕಳಿಗೆ ಕನ್ನಡಮಾಧ್ಯಮದಲ್ಲಿ ಗುಣಾತ್ಮಕ ಶಿಕ್ಷಣ ನೀಡುತ್ತಿರುವುದು ಪೂಜ್ಯರ ಅವಿಸ್ಮರಣೀಯ ಸಾಧನೆಗಳಾಗಿವೆ. ಜನಸಾಮಾನ್ಯರಲ್ಲಿನ ವರ್ಗ, ವರ್ಣ, ಜಾತಿ, ಮತಭೇದಗಳನ್ನು ಮುರಿದು ಮೌಢ್ಯತೆ, ಕಂದಾಚಾರ, ಅಜ್ಞಾನಗಳನ್ನು ಕಿತ್ತೊಗೆಯಲು ಪ್ರತಿ ತಿಂಗಳು ಶಿವಾನುಭವ ಗೋಷ್ಠಿ, ಅನುಭವ ಮಂಟಪ ತಿಂಗಳ ಕಾರ್ಯಕ್ರಮ, ಪ್ರತಿವರ್ಷ ಡಾ. ಚನ್ನಬಸವ ಪಟ್ಟದ್ದೇವರ ಸ್ಮರಣೋತ್ಸವ-ಜಯಂತ್ಯುತ್ಸವಗಳ ನೆಪವಾಗಿ ರಾಜ್ಯ-ರಾಷ್ಟ್ರ ಮಟ್ಟದ ಸಮ್ಮೇಳನ, ಸಮಾವೇಶ ಏರ್ಪಡಿಸಿ, ಜನರಲ್ಲಿ ಸುಜ್ಞಾನ, ಸದಾಚಾರ ಬಿತ್ತುತ್ತಿದ್ದಾರೆ.

ಲೋಕಜ್ಞಾನಕ್ಕಾಗಿ ಪುಸ್ತಕ ಬರೆಯುವುದು, ಅಕ್ಷರ ಪ್ರೀತಿಗಾಗಿ ವಿದ್ವಾಂಸರ ಪುಸ್ತಕಗಳನ್ನು ಪ್ರಕಟಿಸುತ್ತಿರುವುದು, ಅನಾಥರಿಗೆ, ಅಬಲೆಯರಿಗೆ ಆಶ್ರಮ, ಸಾಮೂಹಿಕ ಉಚಿತ ವಿವಾಹ, ನೆರೆರಾಜ್ಯಗಳಾದ ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಬಸವ ಪರಿಷತ್ ಸ್ಥಾಪನೆ, ಬಸವತತ್ವ ಪ್ರಸಾರ ಮತ್ತು ಪ್ರಕಟಣೆ ಮಾಡುತ್ತಿರುವುದು, ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷತೆಯ ಸಾರಥ್ಯವಹಿಸಿದ್ದು ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ. ಜೊತೆಗೆ ವಚನವಿಶ್ವವಿದ್ಯಾಲಯ ಸ್ಥಾಪನೆ ಶ್ರೀಗಳ ಮಹಾತ್ವಾಕಾಂಕ್ಷೆಯ ಸಾಧನೆಯಾಗಿವೆ.

ಯಾವುದೇ ರೀತಿಯ ಪ್ರತಿಫಲಾಪೇಕ್ಷೆಯಿಲ್ಲದ ಇವರ ಸೇವೆಗೆ ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿ, ಗುಲ್ಬರ್ಗ ವಿವಿಯಿಂದ ಗೌರವ ಡಾಕ್ಟರೇಟ್ ಪುರಸ್ಕಾರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ನೂರಾರು ಗೌರವ ಪುರಸ್ಕಾರಗಳು ಸಂದಿವೆ. ತಮ್ಮೊಂದಿಗೆ ತಮ್ಮ ಹೆಜ್ಜೆಯಲ್ಲಿ ಹೆಜ್ಜೆಯನ್ನಿರಿಸಿ, ತಮ್ಮ ನೆರಳಂತೆ ಸಾಗಿ ಬಂದಿರುವ ಶ್ರೀಗುರುಬಸವದೇವರಲ್ಲಿ ಭಾವಿ ಪಟ್ಟದ್ದೇವರನ್ನು ಕಂಡವರು. ದೂರದೃಷ್ಟಿಯುಳ್ಳ ಶ್ರೀಗಳು ತಮ್ಮ ಪಟ್ಟಾಧಿಕಾರ ವಹಿಸಿಕೊಂಡ ೨೫ ವರ್ಷಗಳ ಕಾಲ ವಿಧಾಯಕ ಸೇವೆಸಲ್ಲಿಸಿ

ಶ್ರೀಮಠಕ್ಕೆ ಹೊಸ ಶಕ್ತಿ ನೀಡಲೆಂದು ಶ್ರೀ ಗುರುಬಸವ ದೇವರಿಗೆ ದಿ. ೨೨.೧೨.೨೦೧೧ರಂದೇ ಉತ್ತರಾಧಿಕಾರಿಯಾಗಿ ನೇಮಿಸಿ ಶ್ರೀಮಠದ ಸದ್ಭಕ್ತರ ಸದಿಚ್ಛೆ ಮೇರೆಗೆ ೨೨.೦೪.೨೦೧೬ ಭಾಲ್ಕಿ ಹಿರೇಮಠಕ್ಕೆ ಪೂಜ್ಯ ಶ್ರೀ ಗುರುಬಸವದೇವರ ಸ್ಥಿರ-ಚರ ಪಟ್ಟಾಧಿಕಾರ ಸಮಾರಂಭವನ್ನು ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರ ೧೭ನೆಯ ಸ್ಮರಣೋತ್ಸವ ಜೊತೆಗೆ ನಡೆಸಿರುವುದು ಬಹಳಷ್ಟು ಅರ್ಥಪೂರ್ಣವಾಗಿದೆ.

16. ಗುರುಬಸವರ ಪಟ್ಟಾಧಿಕಾರ:

ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಚಟ್ನಾಳ ಗ್ರಾಮದ ಮೂಲಗೆ ಪರಿವಾರದ ತಾಯಿ ಪುತಳಾಬಾಯಿ ಸುಭಾಷ ಮೂಲಗೆ ದಂಪತಿಗಳ ಸುಪುತ್ರನಾಗಿ ದಿನಾಂಕ: ೦೬-೦೮-೧೯೮೨ ರಂದು ಜನಿಸಿದ ರಾಜಕುಮಾರ (ಪೂಜ್ಯ ಶ್ರೀ. ಗುರುಬಸವ ದೇವರ ಪೂರ್ವಾಶ್ರಮದ ಹೆಸರು) ೧ರಿಂದ ೫ನೇ ತರಗತಿಯವರೆಗೆ ಔರಾದ್‌ನಲ್ಲಿ ಓದಿ, ಮುಂದೆ ಭಾಲ್ಕಿಯ ಕುಮಾರೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಪ್ರವೇಶ ಪಡೆದು ಡಾ. ಚನ್ನಬಸವ ಪಟ್ಟದೇವರ ಜೀವಿತ ಕಾಲದಲ್ಲೇ ಅವರ ಗುರು ಕಾರುಣ್ಯದಪ್ರೀತಿಗೆ ಪಾತ್ರರಾಗಿದ್ದು ಅವರ ಬದುಕಿನ ಅವಿಸ್ಮರಣೀಯ ಕ್ಷಣಗಳು.

ಸದಾ ಚಟುವಟಿಕೆಯಲ್ಲಿ ತೊಡಗಿರುತ್ತಿದ್ದ ಗುರುಬಸವ ಶ್ರೀಮಠದ ಪ್ರಾರ್ಥನೆ ಸಮಾರಂಭ ಸಮಾವೇಶ ಸೇರಿದಂತೆ ಎಲ್ಲ ಕಾರ್ಯಕ್ರಮಗಳಲ್ಲಿ ಸದಾ ಭಕ್ತಿ, ಪ್ರೀತಿಯಿಂದ ಮುಂದಾಗಿ ಪಾಲ್ಗೊಳ್ಳುತಿದ್ದ ಕಾಲದಲ್ಲಿ ಚಿತ್ರದುರ್ಗ ಮುರುಘಾ ಮಠದ ಪೂಜ್ಯ ಶ್ರೀ. ಡಾ. ಶಿವಮೂರ್ತಿ ಶರಣರು ಒಮ್ಮೆ ಭಾಲ್ಕಿ ಮಠಕ್ಕೆ ಬಂದಾಗ ರಾಜಕುಮಾರರನ್ನು ಕರೆದು ಹೆಸರು ಕೇಳಿದರಂತೆ ಕೇಳಲು ನನ್ನ ಹೆಸರು ರಾಜಕುಮಾರ ಎಂದರಂತೆ ಇದು ಅಷ್ಟು ಸಮಂಜಸವಲ್ಲ ವಿಶೇಷವಾಗಿ ಮಠದ ಪರಿಸರಕ್ಕೆ ಸೂಕ್ತವಲ್ಲ. ಆದ್ದರಿಂದ ನಾನೇ ಹೊಸ ಹೆಸರು ಇಡಬಹುದಾ ಎಂದು ಕೇಳಲು ಆಗಲಿ ಎಂದರಂತೆ. ಅದಕ್ಕೆ ಅವರು ರಾಜಕುಮಾರ ಹೆಸರಿನ ಬದಲಾಗಿ ಗುರುಕುಮಾರ ಎಂದು ಕರೆದರು. ಕೆಲದಿನ ಈ ಹೆಸರು ಚಾಲ್ತಿಯುಲ್ಲಿತ್ತು. ಮುಂದೆ

ಯೋಗಾಯೋಗವೆಂಬಂತೆ ಗದುಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ಜಗದ್ಗುರು ಡಾ. ಸಿದ್ದಲಿಂಗ ಮಹಾಸ್ವಾಮಿಗಳು ಭಾಲ್ಕಿ ಶ್ರೀಮಠಕ್ಕೆ ಬಂದಾಗ ಗುರು ಕುಮಾರನ ಕ್ರಿಯಾಶೀಲತೆ ಆಕರ್ಷಕ ಕಾರ್ಯಶೈಲಿ ಗಮನಿಸಿ, ಅವರು ಕರೆದು ಗುರುಕುಮಾರರ ಹೆಸರು ಕೇಳಿದರಂತೆ ಅಲ್ಲದೇ ಈ ಹೆಸರು ಅಷ್ಟು ಸೂಕ್ತವಲ್ಲ. ಇದು ಬಸವತತ್ವದ ಮಠವಾಗಿರುವುದರಿಂದ ಬಸವಕುಮಾರ ಎಂದು ಹೆಸರಿಡಬಹುದಲ್ಲ ಎಂದಾಗ ಅದನ್ನು ಒಪ್ಪಿ ಮುಂದೆ ಬಸವಕುಮಾರ ಎಂಬ ಹೆಸರು ಚಾಲ್ತಿಯಲ್ಲಿ ಬಂತು. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು ಚಿತ್ರದುರ್ಗದ ಶ್ರೀಗಳು ಇಟ್ಟ ಹೆಸರಿನ ಮೊದಲ ಒಂದು ಪದ ಹಾಗೂ ಗದುಗಿನ ಶ್ರೀಗಳು ನೀಡಿದ ಒಂದು ಪದ ಸೇರಿಸಿ ಗುರುಬಸವ ಎಂದು ಕರೆಯಲು ಶುರು ಮಾಡಿದರು. ಸುಮಾರು ಎರಡುವರೆ ದಶಕಗಳಿಂದ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರ ಮಾರ್ಗದರ್ಶನದಲ್ಲಿ ಅಭ್ಯಾಸ, ಅಧ್ಯಯನ ಸೇವೆ ಮಾಡುತ್ತ ವಿದ್ಯಾರ್ಜನೆಗಾಗಿ ಬಂದರೂ ಅಂತಃಕರಣದ ಅಪ್ಪಗಳಾದ ಪೂಜ್ಯ ಶ್ರೀ ಡಾ. ಬಸವಲಿಂಗಪಟ್ಟದ್ದೇವರ ಪ್ರಭಾವಕ್ಕೊಳಗಾಗಿ ಓದಿಗಿಂತ ಸೇವೆ ಶ್ರೇಷ್ಠವೆಂದರಿತು ಪೂಜ್ಯರ ಪ್ರೀತಿಯ ಶಿಷ್ಯರಾದರು.

ಶ್ರೀಮಠದಿಂದ ನಡೆಯುವ ಎಲ್ಲ ಕಾರ್ಯ ಹಾಗೂ ಕಾರ್ಯಕ್ರಮಗಳನ್ನು ಅತ್ಯಂತ ಜವಾಬ್ದಾರಿಯಿಂದ ನೋಡಿಕೊಂಡು ಹೋಗುವ ಗುರುಬಸವ ಸ್ವಾಮಿಗಳು ಶ್ರೀಮಠದ ಕೀರ್ತಿಯನ್ನು ಬಾನೆತ್ತರಕ್ಕೆ ಹಾರಿಸಲು ಕಂಕಣಬದ್ಧರಾಗಿದ್ದಾರೆ. ಎಂದಿನಂತೆ ಡಾ. ಚನ್ನಬಸವ ಪಟ್ಟದ್ದೇವರು ಹಾಕಿಕೊಟ್ಟ ಬಸವ ಮಾರ್ಗದಲ್ಲಿಯೇ ಈ ಮಠ ಇಂದಿಗೂ ಮುನ್ನಡೆಯುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಕನ್ನಡ, ಕರ್ನಾಟಕದ ಬಸವ ಪರಂಪರೆಯ ಮಠಗಳಲ್ಲಿ ಇದು ಕೂಡ ಒಂದು ಎಂಬುದು ಹೆಮ್ಮೆಯ ಸಂಗತಿಯಾಗಿದೆ.

17. ಸಮಾರೋಪ:

೧೨ನೇ ಶತಮಾನದಲ್ಲಿ ಕಲ್ಯಾಣದ ಅಂಗಳದಲ್ಲಿ ತಂಗಿದ್ದ ಬಸವಾದಿ ಶರಣರು ಸಮಾನತೆ, ಸಹೋದರತೆ, ಭ್ರಾತೃತ್ವ, ಸ್ವಾತಂತ್ರ್ಯ ನೆಲೆಗೊಳಿಸಲು ಕಾಯಕ, ದಾಸೋಹ ಎಂಬ ಹೊಸ ಪರಿಕಲ್ಪನೆಗಳನ್ನು ಜಗತ್ತಿಗೆ ಕಾಣಿಕೆಯಾಗಿ ನೀಡಿದವರು. ಅಜ್ಞಾನ, ಅಂಧಕಾರ, ಶೋಷಣೆ ತುಂಬಿದ್ದ ಅಂದಿನ ಕಾಲದಲ್ಲಿ ಈ ಧರೆಯಲ್ಲಿ ಬಾಳಿ ಬದುಕಿದ ಅವರು ಜಗತ್ತಿನ ಶ್ರೇಷ್ಠ ತತ್ವಜ್ಞಾನಿಗಳು. ಸರ್ವರಿಗೆ ಸಮಪಾಲು, ಸಮಬಾಳು ಎಂಬ ಸಮತಾವಾದದಲ್ಲಿ ನಂಬಿಕೆ ಇಟ್ಟು ಆ ದಿಸೆಯಲ್ಲಿ ಅಹರ್ನಿಷಿ ಶ್ರಮಿಸಿದ್ದ ಅವರುಗಳು ಕಲ್ಯಾಣ ರಾಜ್ಯದ ಕನಸು ಕಂಡಿದ್ದರು.

ಅವರ ತರುವಾಯ ೨೦ನೇ ಶತಮಾನದಲ್ಲಿ ಇದೇ ಕಲ್ಯಾಣದ ಅಂಗಳದಲ್ಲಿ ಬಸವಾದಿ ಶರಣರ ಮಾರ್ಗದಲ್ಲಿ ಮುನ್ನಡೆದು ಜನಮನಕ್ಕೆ ಅಂಟಿದ ಕೊಳೆ ತೊಳೆಯಲು ಬಂದಿದ್ದ ಭಾಲ್ಕಿ ಹಿರೇಮಠದ ಮ.ಘ.ಚ. ಡಾ. ಚನ್ನಬಸವ ಪಟ್ಟದ್ದೇವರು ನವಕಲ್ಯಾಣದ ಹಾದಿ ತೋರಿದ ಮಹಾಗುರು. ಬದುಕಿನಲ್ಲಿ ಎರಗಿ ಬಂದ ಎಲ್ಲ ಕಷ್ಟ ನಷ್ಟಗಳಿಗೆ ಎದೆಯೊಡ್ಡಿ ನಿಂತು ಅವುಗಳನ್ನು ಮೆಟ್ಟಿದ ಗಂಡೆದೆಯ ಗುರು. ಇವರ ಬದುಕು ಹಾಗೂ ಬೋಧನೆ ಸಾಕ್ಷಾತ್ ಶರಣ ಮಾರ್ಗ. ಕಾಯಕ, ಭಕ್ತಿ, ಜ್ಞಾನಗಳ ತ್ರಿವೇಣಿ ಸಂಗಮದಂತಿದ್ದ ಅವರಿಗೆ ಬಸವಣ್ಣ, ವಚನ ಹಾಗೂ ಕನ್ನಡ ಅವರ ಉಸಿರಾಗಿದ್ದವು. ಜೀವ ಜೀವಾಳವಾಗಿದ್ದವು.

ಅವರ ಜನನ, ಬಾಲ್ಯ, ಓದು, ವಿದ್ಯಾಭ್ಯಾಸ ಮುಂತಾದವುಗಳನ್ನು ಓದುತ್ತ ಹೋದಂತೆ ಮೈಮನ ರೋಮಾಂಚನಗೊಳ್ಳುತ್ತವೆ. ಬೇಸರಗೊಂಡಾಗಲೊಮ್ಮೆ ಮೌನಾನುಷ್ಠಾನ ಕೈಗೊಳ್ಳುತ್ತಿದ್ದ ಅವರು, ಮೌನದ ಮಹತ್ವ ಸಾರಿದ ಮಹಾಂತ ಎಂಬುದು ನಮಗೆ ಮನದಟ್ಟಾಗುತ್ತದೆ. ಕನ್ನಡ ನಾಡು, ನುಡಿ, ಜಲ, ಭಾಷೆಯ ವಿಷಯ ಬಂದಾಗ ಹಿಡಿದುದ ಬಿಡೆನೆಂಬ ಶರಣರ ಛಲ ಹೊಂದಿದ್ದ ಮಹಾನ್ ಹೋರಾಟಗಾರರಾಗಿದ್ದರು ಎಂಬುದು ತಿಳಿದು ಬರುತ್ತದೆ. ಗುರುಗಳ ಸೇವೆ, ಸಮಾಜ ಸೇವೆ ನೋಡಿದರೆ ಸಮಾಜದ ಬಗ್ಗೆ ಅವರಿಗಿದ್ದ ಕಾಳಜಿ ಎಂಥದು? ಎಂಬುದು ಗೊತ್ತಾಗುತ್ತದೆ.

ಪೂಜ್ಯ ಚನ್ನಬಸವ ಪಟ್ಟದ್ದೇವರು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಮಾಡಿದ ಸತ್ಕಾರ್ಯಗಳನ್ನು ಪಟ್ಟಿ ಮಾಡುತ್ತ ಹೋದರೆ ಅದೊಂದು ಸುಂದರ ಮಹಾಕಾವ್ಯದ ಬೃಹತ್ ಸಂಪುಟಗಳಾಗುತ್ತವೆ. ಪೂಜ್ಯರು ಕೇವಲ ಭಾಲ್ಕಿ ಹಿರೇಮಠಕ್ಕೆ ಮಾತ್ರ ಮಠಾಧೀಶರಾಗಿರಲಿಲ್ಲ. ಅವರು ಇಡೀ ಕನ್ನಡ ನಾಡಿನ ಕನ್ನಡದ ಮಠಗಳಿಗೆ ಮಠಾಧ್ಯಕ್ಷರಾಗಿದ್ದರು ಎಂದರೆ ಅತಿಶಯೋಕ್ತಿಯ ಮಾತಾಗಲಾರದು ಎಂದೆನಿಸುತ್ತದೆ. ಕಲ್ಯಾಣ ನಾಡಿನಲ್ಲಿ ಮೊಟ್ಟ ಮೊದಲು ಕನ್ನಡದ ಕಹಳೆ ಮೊಳಗಿಸಿದ ಕನ್ನಡದ ಕುಲಗುರು ಅವರು. ಕರ್ನಾಟಕದ ಏಕೀಕರಣ, ಫಜಲಶಾಲಿ ಕಮಿಷನ್ ಎದುರಿಗೆ ವಾದಿಸಿ ಹಳೆಯ ಬೀದರ್ ಜಿಲ್ಲೆಯ ನಾಲ್ಕು ತಾಲೂಕುಗಳನ್ನು ಕರ್ನಾಟಕದಲ್ಲಿಯೇ ಉಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕಲ್ಯಾಣ ನಾಡಿನಲ್ಲಿ ಬಸವ ಪರಿಮಳ ಬಿತ್ತಿದ ಇವರು ಸ್ತ್ರೀ ಶಿಕ್ಷಣ, ಸ್ತ್ರೀ ಸಬಲೀಕರಣದ ಬಗ್ಗೆ ಅಂದೇ ಚಿಂತನೆ ನಡೆಸಿದ್ದರು. ಕರ್ನಾಟಕದಲ್ಲಿ ಮೊಟ್ಟ ಮೊದಲು ಬಸವ ದಳ ಹುಟ್ಟು ಹಾಕಿ ಬಸವಧರ್ಮ ಸಂರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದವರು ಇವರು. ಇಂದಿಗೂ ಕೇವಲ ಬರಹ, ಭಾಷಣ ಹಾಗೂ ವೇದಿಕೆಗಳಿಗೆ ಮಾತ್ರ ಸೀಮಿತವಾಗಿರುವ "ದಲಿತೋದ್ಧಾರ" ಅನುಷ್ಠಾನಗೊಳಿಸಿದ ಕರ್ನಾಟಕದ ಏಕೈಕ ಮಠ ಮತ್ತು ಏಕೈಕ ಮಠಾಧೀಶ ಇವರಾಗಿದ್ದಾರೆ. ಒಬ್ಬ ವ್ಯಕ್ತಿಯಾಗಿ ಅಂದು ಅವರು ಮಾಡಿದ ಕಾರ್ಯ ಇಂದಿನ ನಮಗೆ ಬಹು ದೊಡ್ಡ ಶಕ್ತಿಯಾಗಿದೆ. ಅವರ ಜೀವನ-ಸಾಧನೆ ಬಗ್ಗೆ ಎಷ್ಟು ಬಣ್ಣಿಸಿದರೂ ಸಾಲದು.

ಡಾ. ಚನ್ನಬಸವ ಪಟ್ಟದ್ದೇವರು ಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪದ ಕಟ್ಟಿಸಿದರು. ಮಠದಲ್ಲಿ ಶಾಂತಿ ವರ್ಧಕ ಶಿಕ್ಷಣ ಸಂಸ್ಥೆ ಸ್ಥಾಪಿಸಿದರು. ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚ ರಾತ್ರಿ ಎನ್ನುವಂತೆ ಊರೂರು ಸುತ್ತಿ ಶೈಕ್ಷಣಿಕ ಅವಕಾಶಗಳನ್ನು ಕಲ್ಪಿಸಿದರು. ಅತ್ಯಂತ ಸರಳ, ಸಹೃದಯಿ ವಿನಯಶಾಲಿಗಳು ಆಗಿದ್ದ ಅವರಿಗೆ ಯಾವುದೇ ಹಮ್ಮುಬಿಮ್ಮುಗಳಿರಲಿಲ್ಲ. ವೇದಿಕೆ ಹತ್ತಲಿಲ್ಲ. ಮಾತಾಡಲಿಲ್ಲ. ಆದರೆ

ಮಾತಾಡುವವರಿಗಿಂತ ಸಹಸ್ರಪಟ್ಟು ಕೆಲಸ, ಕಾರ್ಯ ಸಾಧನೆ ಮಾಡಿದ್ದಾರೆ. ಪೂಜ್ಯರ ಈ ಅನುಪಮ ಸೇವೆ ಉತ್ತರ ಕರ್ನಾಟಕದಲ್ಲಿ ಡೆಪ್ಯೂಟಿ ಚನ್ನಬಸಪ್ಪನವರ ಕಾರ್ಯವನ್ನು ನೆನಪಿಸುವಂತಿದೆ.

ಅವರು ಅಖಂಡ ಹೋರಾಟ ನಡೆಸಿ ೧೮೩೦-೪೦ರ ಸುಮಾರಿಗೆ ವಿಜಯಪುರ, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸಿದರು. ಅದರಂತೆ ಪೂಜ್ಯರೂ ಸಹ ಕಲ್ಯಾಣ ಕರ್ನಾಟಕದ ಬೀದರ್ ಭಾಗದ ಮೋರ್ಗಿ, ಕಾರಮುಂಗಿ, ಸಂಗಮದಲ್ಲಿ ಕನ್ನಡ ಶಾಲೆಗಳ ಆರಂಭಕ್ಕೆ ಟೊಂಕ ಕಟ್ಟಿ ನಿಂತರು. ಬೆಳಗಾವಿ ಭಾಗದಲ್ಲಿ ಶಿ.ಶಿ. ಬಸವನಾಳರಿಗೆ ಶಿಕ್ಷಣ ಸಂಸ್ಥೆ ಆರಂಭಿಸಿದ ಕೀರ್ತಿ ಸಲ್ಲುವಂತೆ, ಬೀದರ್‌ನಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಆರಂಭಿಸಿದ ಕೀರ್ತಿ ಡಾ. ಚನ್ನಬಸವ ಪಟ್ಟದ್ದೇವರಿಗೆ ಸಲ್ಲುತ್ತದೆ.

ಧಾರ್ಮಿಕ ಕ್ಷೇತ್ರದಲ್ಲೂ ಪೂಜ್ಯರ ಕೊಡುಗೆ ಅಪಾರ. ಬಸವಾದಿ ಶರಣರ ವಿಚಾರಗಳಿಗೆ ಮಾರು ಹೋಗಿದ್ದ ಅವರು ಶರಣರ ಕಂಡ ಕನಸು ನನಸು ಮಾಡಲು ಹೊರಟಂತೆ ಅವರ ಹಾದಿಯಲ್ಲೇ ಜನರನ್ನು ಕೈ ಹಿಡಿದು ಕರೆದೊಯ್ದದ್ದು ಈಗ ಇತಿಹಾಸ. ಪ್ರಖರ ವಾಗ್ಮಿಗಳು ಆಗಿರದ ಪ್ರಚಾರಪ್ರಿಯರೂ ಅಲ್ಲದ ಅವರು, ವೈಯಕ್ತಿಕ ನೆಲೆಯಲ್ಲಿ ಇಷ್ಟಲಿಂಗ ಪೂಜೆ, ಸಾಮೂಹಿಕ ಪ್ರಾರ್ಥನೆಗೆ ಹೆಚ್ಚಿನ ಒತ್ತು ನೀಡುತ್ತಿದ್ದರು. ಸಾಮೂಹಿಕ ಪ್ರಾರ್ಥನೆಯಿಂದ ಸಮೂಹದ ತನುಮನ ಶುದ್ಧಿಯಾಗುತ್ತದೆ ಎಂದು ತಿಳಿದಿದ್ದರು. ಧ್ಯಾನ, ಮೌನಾನುಷ್ಠಾನಗಳಿಂದ ಅಂತರಂಗ ಶುದ್ಧಿಯಾಗ ಬಲ್ಲುವುದು ಎಂದು ನಂಬಿದ್ದರು. ಈ ದೆಸೆಯಲ್ಲಿ ಸ್ವತಃ ಪ್ರಯೋಗ ಮಾಡಿ ಯಶಸ್ವಿ ಸಹ ಕಂಡಿದ್ದರು. ಅವರ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವ ಭಾಲ್ಕಿಯ ಹಿರೇಮಠದ ಎಲ್ಲ ಜನಮುಖಿ ಕಾರ್ಯಗಳಿಗೆ ನಾವು ಸಹಕರಿಸಬೇಕಿದೆ. ಆ ಮೂಲಕ ಮತ್ತೊಂದು ಸಾಧನೆಯ ಮೈಲಿಗಲ್ಲಿಗೆ ಸಾಕ್ಷಿಯಾಗಬೇಕಿದೆ.

ಪೂಜಾ

ಜೊತೆ

ಗುಣಶೇಖರ ಪೊಲೀಸ್ ಪಾಟೀಲ

ಮದುವೆಯ ಹಾರ್ದಿಕ ಶುಭಾಷಯಗಳು

ಪುಸ್ತಕ ದಾಸೋಹಿಗಳು

ಶರಣ ಮಾಣಿಕರಾವ ಅಮೃರಾವ ಪೊಲೀಸ್ ಪಾಟೀಲ

ಸರಳ, ಸಜ್ಜನಿಕೆಗೆ ಹೆಸರಾದ ನ್ಯಾಯವಾದಿ ಶರಣ ಮಾಣಿಕರಾವ ಅಮೃರಾವ ಪೊಲೀಸ್ ಪಾಟೀಲ ಅವರದ್ದು ಅಪರೂಪದ ವ್ಯಕ್ತಿತ್ವ. ಮೂಲತಃ ತೆಲುಗು ಮಂಜ್ರಾಪುರದವಾರಾದ ಇವರು ಎಲ್.ಎಲ್.ಬಿ. ಪಿಜಿ ಡಿಬಿಎಂ ಪದವಿಧರರು. ವೃತ್ತಿಯಿಂದ ವಕೀಲರಾಗಿದ್ದರೂ ಸಮಾಜ ಸೇವೆಗೆ ಹೆಸರಾದವರು. ಬಸವಾದಿ ಶರಣರ ಕಾಯಕ ನಿಷ್ಠೆ, ದಾಸೋಹ ಭಾವ ಮೈಗೂಡಿಸಿಕೊಂಡವರು. ದಯೆ, ಅಂತಃಕರಣ ಇವರ ಬದುಕಿನ ಅಂತಃಶಕ್ತಿಯಾಗಿದ್ದು ಸಾಮಾಜಿಕ ಕಳಕಳಿ ಹೊಂದಿರುವರು. ಅನೇಕರಿಗೆ ಸಹಾಯ ಮಾಡಿದರೂ 'ಮಾಡಿದೆನೆಂಬುದು ಮನದಲ್ಲಿಟ್ಟುಕೊಳ್ಳದ' ಉದಾರವಾದಿಗಳು. ಇವರ ಬದುಕು ಹಸನಾಗಲೆಂದು ಶುಭ ಹಾರೈಸೋಣ.

ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ, ಹಾಗೂ ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆಯ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿ ಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ. ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲಗರ್ಭದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಕನ್ನಡ ಕಟ್ಟಿದವರು ಮಾಲಿಕೆ ಆರಂಭಿಸಲಾಗಿದೆ. ಇದು ಚಾರಿತ್ರಿಕವಾಗಿ ಮಹತ್ವದ ಯೋಜನೆಯಾಗಿದೆ.

ನಮ್ಮ ಮಧ್ಯದ ಪ್ರಮುಖ ಸಾಹಿತಿಗಳಾದ ಶ್ರೀಮತಿ ವಿಜಯಲಕ್ಷ್ಮಿ ಶಿ. ಕೌಟಗೆ ಅವರು ಬರೆದ ಕನ್ನಡದ ಪಟ್ಟದ್ದೇವರು ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರು ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. . ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರು ಬಸವತತ್ವ, ಕನ್ನಡತ್ವವನ್ನು ಸಮನ್ವಯಗೊಳಿಸಿ ಈ ಭಾಗದಲ್ಲಿ ಶೈಕ್ಷಣಿಕವಾಗಿ ಬಹುದೊಡ್ಡ ಕ್ರಾಂತಿ ಮಾಡಿರುವರು. ಬಸವ ತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಗಳ ಬದುಕು ಬರಹ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಆದ್ದರಿಂದ ಸಹೃದಯರು ಸಹಸ್ಪಂದಿಸಿ ಈ ಪುಸ್ತಕ ಓದುವ ಮೂಲಕ ಅಕ್ಷರ ಪ್ರೀತಿ ಮೆರೆದರೆ ಪರಿಷತ್ತಿನ ಶ್ರಮ ಸಾರ್ಥಕವೆಂದು ಭಾವಿಸಲಾಗಿದೆ.

ಸುರೇಶ ಚನಶೆಟ್ಟಿ

ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ